ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

## Monthly Magazine

ಸಂಪುಟ 9 ಸಂಚಿಕೆ 3 ಮಾರ್ಚ್ 2024

## ಶ್ರೀ ಸುತ್ತೂರು ಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವ





ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ದೇಸೀಕ್ರೀಡೆಗಳ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಸಚಿವರಾದ ಶ್ರೀ ಕೆ.ಜೆ. ಜಾರ್ಜ್, ಡಾ. ಜಿ. ಪರಮೇಶ್ವರ, ತಪೋರತ್ನ ಕರುಣಾದೇವಿ ಮಾತಾ, ಡಾ. ಹೆಚ್.ಸಿ. ಮಹದೇವಪ್ಪ ಮೊದಲಾದವರುಗಳಿದ್ದಾರೆ (8 ಫೆಬ್ರವರಿ 2024)



ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆರನೆಯ ಘಟಿಕೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಪ್ರೊ. ಎಸ್.ಎ. ಧನರಾಜ್, ಡಾ. ಬಿ. ಸುರೇಶ್, ಡಾ. ಸಿ.ಜಿ. ಬೆಟಸೂರಮಠ, ಶ್ರೀಮತಿ ಅನುರಾಧ ಸೀತಾರಾಮ್, ಡಾ. ಟಿ.ಜಿ. ಸೀತಾರಾಮ್, ಪ್ರೊ. ಎ.ಎನ್. ಸಂತೋಷ್‌ಕುಮಾರ್, ಪ್ರೊ. ಎಸ್.ಎ. ಕೋರಿ, ಪ್ರೊ. ಪಿ. ನಂಜುಂಡಸ್ವಾಮಿ ಹಾಗೂ ಪದಕ ಮತ್ತು ಪ್ರಶಸ್ತಿ ಪುರಸ್ಕೃತ ಪದವೀಧರರುಗಳಿದ್ದಾರೆ (24 ಫೆಬ್ರವರಿ 2024)

# ಸುತ್ತೂರು ಜಾತ್ರಾ ಮಹೋತ್ಸವ – 2024

**ಶ್ರೀ ಸುತ್ತೂರು ಕ್ಷೇತ್ರದಲ್ಲಿ ಫೆಬ್ರವರಿ 6ರಿಂದ 11ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.**

## ರಾಷ್ಟ್ರವನ್ನು ಒಂದಾಗಿಸಿದ್ದೇ ಜಾತ್ರೆಗಳು



ಜಾತ್ರಾ ಮಹೋತ್ಸವದಲ್ಲಿ ವಸ್ತುಪ್ರದರ್ಶನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ರೂಪಾಲಿ ನಾಯ್ಕ್, ಡಾ. ಪಿ.ಸಿ. ಕುಮಾರಸ್ವಾಮಿ, ಸಚಿವರಾದ ಶ್ರೀ ದಿನೇಶ್ ಗುಂಡೂರಾವ್, ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು, ಶ್ರೀ ಆರ್. ಗಣೇಶ್ ಮೊದಲಾದವರಿದ್ದಾರೆ (6 ಫೆಬ್ರವರಿ 2024)

ರಾಷ್ಟ್ರವನ್ನು ಒಂದಾಗಿಸಿದ್ದೇ ಜಾತ್ರೆಗಳು ಎಂದು ಕನ್ನೇರಿಯ ಶ್ರೀ ಸಿದ್ಧಗಿರಿ ಸಂಸ್ಥಾನ ಮಠದ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 6.2.2024ರಂದು ವಸ್ತುಪ್ರದರ್ಶನ, ಕೃಷಿಮೇಳ, ಆರೋಗ್ಯ ತಪಾಸಣಾ ಶಿಬಿರ, ಸಾಂಸ್ಕೃತಿಕ ಮೇಳ ಹಾಗೂ ದೋಣಿ ವಿಹಾರಗಳ ಉದ್ಘಾಟನೆಯ ಸಮ್ಮುಖ ವಹಿಸಿ ಮಾತನಾಡಿದ ಅವರು ಶತ ಶತಮಾನಗಳಿಂದಲೂ ಭಾರತ ಒಂದಾಗಿರಲು ದೇವಾಲಯಗಳು, ಜಾತ್ರೆಗಳು ಹಾಗು ಸಂಪ್ರದಾಯಗಳೇ ಕಾರಣ. ನಮ್ಮ ಹಿರಿಯರು ಜೀವನವನ್ನು ಆನಂದಮಯವಾಗಿಸಲು ತಿಥಿಪರ್ವದ ಮೂಲಕ ಉತ್ಸವಗಳನ್ನು, ಸ್ಮೃತಿಪರ್ವದ ಮೂಲಕ ಐತಿಹಾಸಿಕ ಘಟನೆಗಳ ಸಂಭ್ರಮವನ್ನು, ರಥಪರ್ವದ ಮೂಲಕ ಉಪಾಸನೆಯನ್ನು, ಋತುಪರ್ವಗಳೆಂಬ ಹಬ್ಬಗಳ ಮೂಲಕ ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಸುತ್ತೂರು ಜಾತ್ರೆಯಲ್ಲಿ ಸಾಮಾಜಿಕ, ಶೈಕ್ಷಣಿಕ, ಕೃಷಿ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆದ ಹೊಸ ಆವಿಷ್ಕಾರಗಳ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಿರುವ ಕಾರಣ ಈ ಜಾತ್ರಾ ಮಹೋತ್ಸವ ಇಡೀ ರಾಜ್ಯದಲ್ಲೇ ಮಹತ್ವ ಪಡೆದುಕೊಂಡಿದೆ ಎಂದರು.

ಶಾಲಾ ಶಿಕ್ಷಣ, ಸಾಕ್ಷರತಾ ಮತ್ತು ಸಕಾಲ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಕೃಷಿ ಸೇರಿದಂತೆ ಎಲ್ಲಾ ರಂಗದಲ್ಲೂ ಜನರಿಗೆ ಅರಿವು ಮೂಡಿಸುತ್ತಾ ಸರ್ಕಾರ

ಮಾಡುವ ಕೆಲಸವನ್ನು ಸುತ್ತೂರು ಶ್ರೀಮಠ ಮಾಡುತ್ತಿದೆ. ಮಕ್ಕಳ ಪ್ರತಿಭೆಗೆ ಹಲವಾರು ವೇದಿಕೆಗಳನ್ನು ಒದಗಿಸಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಿಂಬಾಳದ ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ, ಊಟಿಯ ಶಾಸಕರಾದ ಶ್ರೀ ಆರ್. ಗಣೇಶ್, ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಎಸ್. ಪಚ್ಚಾಪೂರೆ, ಮಾಜಿ ಶಾಸಕರಾದ ಶ್ರೀಮತಿ ರೂಪಾಲಿ ನಾಯ್ಕ್ ಉಪಸ್ಥಿತರಿದ್ದರು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಪಿಯರ್ ಸಿಲ್ವಿನ್ ಫಿಲಿಯೋಜಾ ಮತ್ತು ಡಾ. ವಸುಂಧರಾ ಫಿಲಿಯೋಜಾ ದಂಪತಿಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿದರು. ಶ್ರೀ ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

## ಬಿಸಿಯೂಟ ಯೋಜನೆ ಜಾರಿಗೆ ಸುತ್ತೂರು ಶ್ರೀಗಳೇ ಪ್ರೇರಣೆ



ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾಮೇಳ, ಸೋಬಾನೆಪದ ಹಾಗೂ ರಂಗೋಲಿ ಸ್ಪರ್ಧೆಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಎಸ್.ಎಂ. ಕೃಷ್ಣರವರು ಉದ್ಘಾಟಿಸಿದರು. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಹೆಚ್.ಎಸ್. ಚಂದ್ರಮೌಳಿ, ಶ್ರೀ ಬಸವಾನಂದ ಸ್ವಾಮಿಗಳು, ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಡಾರ್ಲಿಂಗ್ ಕೃಷ್ಣ, ತಪೋರತ್ನ ಕರುಣಾದೇವಿ ಮಾತಾ, ಶ್ರೀ ಎಸ್.ಕೆ. ಮಂಜುನಾಥ್ ಹಾಗೂ ಶ್ರೀಮತಿ ಸುಮಲತಾ ಅಂಬರೀಷ್ ಮೊದಲಾದವರಿದ್ದಾರೆ (7 ಫೆಬ್ರವರಿ 2024)

ಬಿಸಿಯೂಟ ಯೋಜನೆ ಜಾರಿಗೆ ಸುತ್ತೂರು ಶ್ರೀಗಳೇ ಪ್ರೇರಣೆಯಾಗಿದ್ದರು ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 7.2.2024ರಂದು ರಾಜ್ಯಮಟ್ಟದ ಭಜನಾಮೇಳ, ಸೋಬಾನೆ ಪದ ಮತ್ತು ರಂಗೋಲಿ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ಅನೇಕ ಸಂಕಷ್ಟದ ಸಂದರ್ಭಗಳಲ್ಲಿ ಪೂಜ್ಯರು ನನಗೆ ಆತ್ಮಸ್ಥೈರ್ಯವನ್ನು ತುಂಬಿದ್ದಾರೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಭೀಕರ ಬರಗಾಲದಲ್ಲೂ ಹಸಿದ ಹೊಟ್ಟೆಗೆ ಅನ್ನ ನೀಡಲು ಅಕ್ಷರ ದಾಸೋಹ ಬಿಸಿಯೂಟ ಯೋಜನೆ ಜಾರಿಗೆ ತರಲಾಯಿತು ಎಂದು ಹೇಳಿದರು.

ಮನಗುಂಡಿಯ ಶ್ರೀ ಬಸವಾನಂದ ಸ್ವಾಮಿಗಳು, ಶ್ರೀಶೈಲದ ತಪೋರತ್ನ ಕರುಣಾದೇವಿ ಮಾತಾ, ಸಂಸದರಾದ ಶ್ರೀಮತಿ ಸುಮಲತಾ ಅಂಬರೀಷ್, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ ಹಾಗೂ ಚಲನಚಿತ್ರ ಕಲಾವಿದರಾದ ಶ್ರೀ ಡಾರ್ಲಿಂಗ್ ಕೃಷ್ಣರವರುಗಳು ಉಪಸ್ಥಿತರಿದ್ದರು.

## ವಿದ್ಯಾವಂತರು ಮೌಢ್ಯದ ದಾಸರಾಗಬಾರದು

ವಿದ್ಯಾವಂತರು ಮೌಢ್ಯದ ದಾಸರಾಗಬಾರದು ಎಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 7.2.2024ರಂದು ದೇಸಿ ಆಟಗಳ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡುತ್ತಾ ಶಿಕ್ಷಣ ಸಮಾಜವನ್ನು ಬೆಸೆಯಬೇಕು, ಶಾಂತಿ ನೆಮ್ಮದಿ ಮೂಡಿಸಬೇಕು, ಕಂದಾಚಾರ ಮೌಢ್ಯಗಳನ್ನು ಅಳಿಸಬೇಕು ಎಂಬುದೇ ಬಸವಾದಿ ಶರಣರ ಆಶಯವಾಗಿತ್ತು. ಆ ಕೆಲಸವನ್ನು ಸುತ್ತೂರು ಶ್ರೀಮಠವು ಮಾಡುತ್ತಿದೆ. ಸುತ್ತೂರು ಜಾತ್ರೆಯಲ್ಲಿ ಎಲ್ಲ ಜಾತಿ, ಧರ್ಮ, ಜನಾಂಗದವರು ಸೌಹಾರ್ದತೆಯಿಂದ ಭಾಗವಹಿಸುವುದರಿಂದ ಇದು ದೇಶದಲ್ಲೇ ವಿಶೇಷವಾದ ಜಾತ್ರೆಯಾಗಿದೆ ಎಂದು ಹೇಳಿದರು.

ಸಚಿವರುಗಳಾದ ಡಾ. ಜಿ. ಪರಮೇಶ್ವರ, ಶ್ರೀ ಕೆ.ಜೆ. ಜಾರ್ಜ್, ಡಾ. ಹೆಚ್.ಸಿ. ಮಹದೇವಪ್ಪ, ಡಾ. ಎಂ.ಸಿ. ಸುಧಾಕರ್, ಶ್ರೀ ಕೆ. ವೆಂಕಟೇಶ್, ವಿಧಾನಪರಿಷತ್ ಸದಸ್ಯರಾದ ಡಾ. ಕೆ. ಗೋವಿಂದರಾಜು, ಮಾಜಿ ಶಾಸಕರುಗಳಾದ ಶ್ರೀ ಕಳಲೆ ಕೇಶವಮೂರ್ತಿ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಮೂಲ್‌ಚಂದ್ ನಹರ್, ಶ್ರೀ ಎಸ್.ಕೆ. ಮಂಜುನಾಥ್‌ರವರುಗಳು ಉಪಸ್ಥಿತರಿದ್ದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಸ್ವಾಗತಿಸಿದರು. ಶ್ರೀ ರಾಜಶೇಖರ್ ವಂದಿಸಿದರು. ಡಾ. ರೇಚಣ್ಣ ಕಾರ್ಯಕ್ರಮ ನಿರೂಪಿಸಿದರು.

## ವರದಕ್ಷಿಣೆ ಪಿಡುಗು ನಿವಾರಿಸಲು ಸಾಮೂಹಿಕ ವಿವಾಹ ಸಹಕಾರಿ



ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ 118 ಜೋಡಿ ವಧುವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಗೋರಟಾ ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ತಪೋರತ್ನ ಕರುಣಾದೇವಿ ಮಾತಾರವರು, ಸ್ವಾಮಿ ಸಾಯುಜ್ಯನಾಥ ಜ್ಞಾನತಪಸ್ವಿ, ಸ್ವಾಮಿ ಭಕ್ತರತ್ನಂ ಜ್ಞಾನತಪಸ್ವಿ, ಸ್ವಾಮಿ ಗುರುರತ್ನಂ ಜ್ಞಾನತಪಸ್ವಿ, ಕಾಗಿನೆಲೆ ಜಗದ್ಗುರುಗಳು, ಕನಕಪುರ, ಪಡಗೂರು ಶ್ರೀಗಳು, ಶ್ರೀ ಅಮರನಾಥ್‌ಗೌಡ, ಶ್ರೀ ಪ್ರಭುದೇವ್, ಶ್ರೀ ರಾಚಪ್ಪ, ಶ್ರೀ ಶಿವಾನಂದ್, ಶ್ರೀ ವೆಂಕಟೇಶ್ವರರಾವ್, ಶ್ರೀ ಸೋಮಶೇಖರ್ ಮೊದಲಾದವರುಗಳಿದ್ದಾರೆ (7 ಫೆಬ್ರವರಿ 2024)

ವರದಕ್ಷಿಣೆ ಪಿಡುಗು ನಿವಾರಿಸಲು ಸಾಮೂಹಿಕ ವಿವಾಹ ಸಹಕಾರಿಯಾಗುತ್ತದೆ ಎಂದು ಕಾಗಿನೆಲೆಯ ಕನಕಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 7.2.2024ರಂದು ನಡೆದ ಸಾಮೂಹಿಕ ವಿವಾಹದ ಸಮ್ಮುಖ ವಹಿಸಿ ಮಾತನಾಡುತ್ತಾ ವರದಕ್ಷಿಣೆ ಪದ್ಧತಿ ಇಂದಿಗೂ ಜೀವಂತವಾಗಿದೆ. ಇದು ದೂರವಾಗಬೇಕಾದರೆ ಇಂತಹ

ಸಾಮೂಹಿಕ ಹಾಗೂ ಸರಳ ವಿವಾಹದಿಂದ ಮಾತ್ರ ಸಾಧ್ಯ. ನವದಂಪತಿಗಳನ್ನು ಹಿರಿಯರು ಗಮನಿಸುತ್ತಿರಬೇಕು. ದಂಪತಿಗಳಲ್ಲಿ ವಿಶಾಲ ಮನೋಭಾವ ಇರಬೇಕು. ಇದು ಸುಂದರ ಜೀವನಕ್ಕೆ ನಾಂದಿಯಾಗುತ್ತದೆ ಎಂದು ಹೇಳಿದರು.

ತಿರುವನಂತಪುರ ಶಾಂತಗಿರಿ ಆಶ್ರಮದ ಸ್ವಾಮಿ ಗುರುರತ್ನಂ ಜ್ಞಾನತಪಸ್ವಿಯವರು ಅನ್ನ, ಅಕ್ಷರ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದಾಸೋಹ ಕೈಗೊಂಡಿರುವ, ದೇಶಕ್ಕೆ ಮಾದರಿಯಾಗಿರುವ ಸುತ್ತೂರು ಶ್ರೀಕ್ಷೇತ್ರದಲ್ಲಿ ವಿವಾಹವಾಗುತ್ತಿರುವ ಜೋಡಿಗಳು ಪುಣ್ಯವಂತರು ಎಂದರು.

118 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಡಾ. ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ಸ್ವಾಮಿ ಭಕ್ತರತ್ನಂ ಜ್ಞಾನತಪಸ್ವಿ, ಸ್ವಾಮಿ ಸಾಯುಜ್ಯನಾಥ ಜ್ಞಾನತಪಸ್ವಿ, ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಅಮೆರಿಕ ಕನ್ನಡ ಕೂಟಗಳ ಆಗರದ ಅಧ್ಯಕ್ಷರಾದ ಶ್ರೀ ಅಮರನಾಥ್‌ಗೌಡ, ವಾಷಿಂಗ್ಟನ್‌ನ ಶ್ರೀ ಶಿವಾನಂದ್ ಉಪಸ್ಥಿತರಿದ್ದರು. ಕೆಪಿಎಸ್‌ಸಿ ಸದಸ್ಯರಾದ ಶ್ರೀ ಪ್ರಭುದೇವ್ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ಸ್ವಾಗತಿಸಿದರು. ಶ್ರೀ ಕಾವ್ಯ ಶಿವಮೂರ್ತಿ ವಂದಿಸಿದರು. ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ದುಗ್ಗಟ್ಟಿ ಕಾರ್ಯಕ್ರಮ ನಿರೂಪಿಸಿದರು.

## ಒಗ್ಗಟ್ಟಿಗೆ ಆಧ್ಯಾತ್ಮಿಕ ವಿಚಾರಗಳೇ ತಳಹದಿ



ಜಾತ್ರಾ ಮಹೋತ್ಸವದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವಕ್ಕೆ ಗೋವಾದ ರಾಜ್ಯಪಾಲರಾದ ಶ್ರೀ ಪಿ.ಎಸ್. ಶ್ರೀಧರನ್ ಪಿಳ್ಳೈರವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಿದರು. ಶ್ರೀ ಮಂಕಾಳ್ ಎಸ್. ವೈದ್ಯ, ಶ್ರೀ ಬಿ.ಎಸ್. ಯಡಿಯೂರಪ್ಪ ಹಾಗೂ ಶ್ರೀಮತಿ ರೀಟಾ ಶ್ರೀಧರನ್ ಪಿಳ್ಳೈ ಮೊದಲಾದವರುಗಳಿದ್ದಾರೆ (8 ಫೆಬ್ರವರಿ 2024)

ಪ್ರತಿಯೊಬ್ಬರೂ ಒಗ್ಗಟ್ಟಾಗಿರಲು ಆಧ್ಯಾತ್ಮಿಕ ವಿಚಾರಗಳು ತಳಹದಿಯಾಗಿವೆ ಎಂದು ಗೋವಾದ ರಾಜ್ಯಪಾಲರಾದ ಗೌರವಾನ್ವಿತ ಶ್ರೀ ಶ್ರೀಧರನ್ ಪಿಳ್ಳೈರವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 8.2.2024ರಂದು ರಥೋತ್ಸವ ಮತ್ತು ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತೀಯ ಸಮಾಜದ ಎಲ್ಲಾ ಚಟುವಟಿಕೆಗಳಿಗೂ ಧಾರ್ಮಿಕ ಮತ್ತು ಆಧ್ಯಾತಿಕ ವಿಚಾರಗಳು ಮೂಲಬೀಜಗಳಂತಿವೆ. ದೇಶದ ಅಧ್ಯಾತ್ಮ ಚಿಂತಕರು ಸ್ವಾತಂತ್ರ್ಯ ಹೋರಾಟಕ್ಕೂ ಪ್ರೇರಣೆಯಾಗಿದ್ದರು. ವಚನಕಾರರು 12ನೇ ಶತಮಾನದಲ್ಲಿ ಸಾಮಾಜಿಕ

ಸಮಾನತೆಯನ್ನು ತರಲು ಭಕ್ತಿ ಚಳವಳಿ ನಡೆಸಿದರು. ಮಠಗಳ ಮೂಲಕ ಜನರಿಗೆ ಆಧ್ಯಾತ್ಮ ಶಕ್ತಿಯನ್ನು ನೀಡಿದರು. ಎಂಟು ನೂರು ವರ್ಷಗಳ ಹಿಂದೆಯೇ ಅನುಭವ ಮಂಟಪದ ಮೂಲಕ ಸಂಸತ್ ಪರಿಕಲ್ಪನೆಯನ್ನು ಬಸವಣ್ಣ ಹಾಗೂ ವಚನಕಾರರು ನೀಡಿದ್ದರು ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಜಾತ್ರೆಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳು ದೇಶದ ಸಾಂಸ್ಕೃತಿಕ ರಾಯಭಾರಿಗಳಾಗಿವೆ. ಪರಕೀಯರ ದಾಳಿಗೆ ಒಳಗಾಗಿ ವಿಶ್ವದ ನೂರಾರು ನಾಗರಿಕತೆಗಳು ನಾಶವಾಗಿದ್ದರೂ ಸನಾತನ ಧರ್ಮ ಹಾಗೂ ಭಾರತ ಗಟ್ಟಿಯಾಗಿ ನೆಲೆ ನಿಂತಿದೆ. ಜಗತ್ತು ನಮ್ಮ ದೇಶದ ಆಧ್ಯಾತ್ಮಿಕತೆ ಹಾಗೂ ಧಾರ್ಮಿಕ ವಿಚಾರಗಳ ಬಗ್ಗೆ ಆಕರ್ಷಿತವಾಗಿದೆ ಎಂದು ತಿಳಿಸಿದರು.

ಶ್ರವಣಬೆಳಗೊಳ ಜೈನಮಠದ ಸ್ವಸ್ತಿಶ್ರೀ ಜಗದ್ಗುರು ಅಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು ಧಾರ್ಮಿಕರಿಲ್ಲದೆ ಧರ್ಮ ಇಲ್ಲ, ಜನ ಇಲ್ಲದೆ ಜಾತ್ರೆ ಇಲ್ಲ. ಎಲ್ಲಾ ಜನರ ಒಳಿತು, ಶಾಂತಿ, ಕೀರ್ತಿಗಾಗಿಯೇ ಸುತ್ತೂರು ಜಾತ್ರೆ ನಡೆಯುತ್ತಿದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ಮಂಕಾಳ್ ಎಸ್. ವೈದ್ಯ, ಮಾಜಿ ಸಚಿವರಾದ ಶ್ರೀ ಮುರುಗೇಶ್ ಆರ್. ನಿರಾಣಿ, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಎ. ಮಂಜು, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ದಿನೇಶ್ ಗೂಳಿಗೌಡ, ಶ್ರೀ ಎಲ್. ನಾಗೇಂದ್ರ, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ತೋಂಟದಾರ್ಯ, ಶ್ರೀ ದೀಪಕ್ ಸಲೂಜ, ಡಾ. ಸಿ. ಸೋಮಶೇಖರ್, ಶ್ರೀ ಮರಿಸ್ವಾಮಿ, ಡಾ. ಎಂ.ಡಿ. ಲಕ್ಷ್ಮೀನಾರಾಯಣರವರುಗಳು ಉಪಸ್ಥಿತರಿದ್ದರು. ಡಾ. ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಶ್ರೀ ಮಾಲಂಗಿ ಸುರೇಶ್ ವಂದಿಸಿದರು. ಶ್ರೀ ಯೋಗೀಶ್ ಚುಂಚನಹಳ್ಳಿ ಕಾರ್ಯಕ್ರಮ ನಿರೂಪಿಸಿದರು.

## ಸರ್ವರನ್ನೂ ಪ್ರೀತಿಯಿಂದ ಪೋಷಿಸುತ್ತಿರುವ ಸುತ್ತೂರು ಶ್ರೀಮಠ



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಐವತ್ಮೂರನೆಯ ದನಗಳ ಜಾತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ತನ್ವೀರ್ ಸೇಠ್, ಶ್ರೀ ನಿಜಗುಣದೇವರು, ಶ್ರೀ ಅಭಿನವ ಸಿದ್ಧಾರೂಢ ಸ್ವಾಮಿಗಳು ಮೊದಲಾದವರಿದ್ದಾರೆ (8 ಫೆಬ್ರವರಿ 2024)

ಸುತ್ತೂರು ಶ್ರೀಮಠವು ಜಾತಿ ಧರ್ಮದ ಎಲ್ಲೆಯನ್ನು ಮೀರಿ ಎಲ್ಲರನ್ನೂ ಪ್ರೀತಿಯಿಂದ ಪೋಷಿಸುತ್ತಿದೆ ಎಂದು ಬೆಳಗಾವಿ ಜಿಲ್ಲೆ ಪಿ.ಜಿ. ಹುಣಶ್ಯಾಳದ ಶ್ರೀ ನಿಜಗುಣದೇವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 8.2.2024ರಂದು 53ನೇ ದನಗಳ ಜಾತ್ರೆ, ಚಿತ್ರಕಲಾ ಮತ್ತು ಗಾಳಿಪಟ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಬಸವಾದಿ ಶರಣರ ತತ್ತ್ವಗಳಿಗನುಸಾರವಾಗಿ ಮಠ ಸಾಗುತ್ತಿದೆ. ಗ್ರಾಮೀಣ ಜನರಿಗೆ ಧಾರ್ಮಿಕತೆಯ ಜೊತೆಗೆ ಮನಸ್ಸಿಗೆ ಸಂತೋಷ ನೀಡುವಂತಹ ವಾತಾವರಣವನ್ನು ಈ ಜಾತ್ರೆಯಲ್ಲಿ ಕಲ್ಪಿಸಲಾಗಿದೆ ಎಂದು ಹೇಳಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ತನ್ವೀರ್ ಸೇಠ್‌ರವರು ನಮ್ಮ ಸಂಸ್ಕೃತಿ ಪರಂಪರೆ, ಉಳಿಸಿ ಬೆಳೆಸಲು ವಿದ್ಯಾರ್ಥಿಗಳಿಗೆ ಮೌಲ್ಯಯುತ, ಸಂಸ್ಕಾರಯುತ ಶಿಕ್ಷಣವನ್ನು ನೀಡಬೇಕು. ನಮ್ಮ ಸಂಸ್ಕೃತಿ, ಪರಂಪರೆಗಳು ನಶಿಸುತ್ತಿರುವ ಕಾಲಘಟ್ಟದಲ್ಲಿ ಸುತ್ತೂರು ಜಾತ್ರೆಯಲ್ಲಿ ಗ್ರಾಮೀಣ ಬದುಕು ಸುಂದರವಾಗಿ ಅನಾವರಣಗೊಂಡಿದೆ ಎಂದರು.

ಹುಬ್ಬಳ್ಳಿ ಶ್ರೀ ಶಾಂತಾಶ್ರಮದ ಶ್ರೀ ಅಭಿನವ ಸಿದ್ಧಾರೂಢ ಸ್ವಾಮಿಗಳು, ಯರನಾಳ ಶ್ರೀಗಳು, ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಹೆಚ್.ಬಿ. ಬೊಮ್ಮನಹಳ್ಳಿ, ಶ್ರೀ ಜಿ.ಎನ್. ಶಿವಮೂರ್ತಿ, ಶ್ರೀ ಚೆಲುವರಾಜುರವರುಗಳು ಉಪಸ್ಥಿತರಿದ್ದರು. ಪ್ರೊ. ಸುಬ್ಬಪ್ಪ ಬೊಕ್ಕಳ್ಳಿ ಸ್ವಾಗತಿಸಿದರು. ಶ್ರೀ ಉಮಾ ಮಹೇಶ್ವರ್ ವಂದಿಸಿದರು. ಪ್ರೊ. ಪಿ.ಎಂ. ಮಹಾದೇವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಶ್ರೀಮಠಕ್ಕೆ ಸಮಾಜ ಬದಲಾಯಿಸುವ ಶಕ್ತಿಯಿದೆ



ಜಾತ್ರಾ ಮಹೋತ್ಸವದಲ್ಲಿ 'ಕೃಷಿಯಲ್ಲಿ ನೀರಿನ ಸದ್ಬಳಕೆ' ವಿಷಯ ಕುರಿತು ಏರ್ಪಡಿಸಿದ್ದ ಕೃಷಿ ವಿಚಾರಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ಉದ್ಘಾಟಿಸಿದರು. ಶ್ರೀ ಚಂದ್ರಶೇಖರ್, ಶ್ರೀ ರಾಜೇಶ್ ಚಂದರ್, ಶ್ರೀಮತಿ ಮಮತ ಶೇಖರ್, ಮಾತಾ ಶಕ್ತಿ ಮಾಯಿ, ಶ್ರೀ ಯು. ಸರವಣನ್, ಡಾ. ಎಸ್.ವಿ. ಸುರೇಶ್, ಶ್ರೀ ಬಿ.ವಿ. ವಿಠ್ಠಲ್ ಮೊದಲಾದವರುಗಳಿದ್ದಾರೆ (9 ಫೆಬ್ರವರಿ 2024)

ಸುತ್ತೂರು ಶ್ರೀಮಠಕ್ಕೆ ಸಮಾಜ ಬದಲಾಯಿಸುವ ಶಕ್ತಿಯಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 9.2.2024ರಂದು ಕೃಷಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು ಜೆಎಸ್‌ಎಸ್ ಸಂಸ್ಥೆಯು ಕೃಷಿ ಕ್ಷೇತ್ರದ ಸಾಧಕರನ್ನು ಗುರುತಿಸಿ ಉತ್ತೇಜಿಸುವ ಮೂಲಕ ರೈತರು ಕೃಷಿ ಕ್ಷೇತ್ರದಲ್ಲಿ ನೆಲೆ ನಿಲ್ಲುವಂತೆ ಮಾಡುತ್ತಿದೆ. ಜಾತ್ರೆಯಲ್ಲಿ ವಿವಿಧ ಕ್ಷೇತ್ರಗಳ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಸಾಮಾನ್ಯವಾಗಿ ಬೇರೆ ಕ್ಷೇತ್ರಕ್ಕೆ ಸಿಗುವ ಗೌರವ ಕೃಷಿ ಕ್ಷೇತ್ರಕ್ಕೆ ಸಿಗುವುದಿಲ್ಲ. ಅದನ್ನು ಮನಗಂಡು ಕೃಷಿಯಲ್ಲಿ ವಿವಿಧ ಬೆಳೆಗಳನ್ನು ಬೆಳೆದಿರುವ ರೈತರನ್ನು ಉತ್ತೇಜಿಸಿ ಕೃಷಿಯಲ್ಲಿ ನೆಲೆ ನಿಲ್ಲುವಂತೆ ಮಾಡುವ ಪ್ರಯತ್ನ ಜಾತ್ರೆಯಲ್ಲಿ ನಡೆಯುತ್ತಿದೆ ಎಂದರು.

ನೀಲಗಿರಿ ಎಡಪಲ್ಲಿಯ ಮಾತಾ ಶಕ್ತಿಮಾಯಿ, ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ನ್ಯಾಷನಲ್ ಫರ್ಟಿಲೈಜರ್ಸ್‌ನ ಶ್ರೀ ಯು. ಸರವಣನ್, ಶ್ರೀ ಬಿ.ವಿ. ವಿಠ್ಠಲ್, ಕುಲಪತಿಗಳಾದ ಡಾ. ಎಸ್.ವಿ. ಸುರೇಶ್, ಡಾ. ಲಿಂಗರಾಜ ಗಾಂಧಿ, ಶ್ರೀ ಎ. ರಾಜಶೇಖರ್, ಶ್ರೀಮತಿ ಮಮತ ಶೇಖರ್, ಶ್ರೀ ರಾಜೇಶ್ ಕೋತಗಿರಿ, ಶ್ರೀ ಬಿ. ಸುದರ್ಶನ್, ಶ್ರೀಮತಿ ಗಿರಿಜಾ ಸುದರ್ಶನ್‌ರವರುಗಳು ಉಪಸ್ಥಿತರಿದ್ದರು. ಡಾ. ಹೆಚ್.ವಿ. ದಿವ್ಯಾ ಸ್ವಾಗತಿಸಿದರು. ಡಾ. ಯು.ಎಂ. ರಕ್ಷಿತ್‌ರಾಜ್ ವಂದಿಸಿದರು. ಶ್ರೀ ವೈ.ಎಂ. ಸಾಸಲಾರಾಧ್ಯ ಕಾರ್ಯಕ್ರಮ ನಿರೂಪಿಸಿದರು.

## ರೈತರ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ದೊರಕಬೇಕು




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್‌ರವರು ಮಾತನಾಡುತ್ತಿರುವುದು. ಶ್ರೀ ಹೆಚ್.ಕೆ. ಮಂಜುನಾಥ್, ಶ್ರೀ ಎ.ಹೆಚ್. ವಿಶ್ವನಾಥ್, ಶ್ರೀ ಬಸವರಾಜ ಎಸ್. ಹೊರಟ್ಟಿ, ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ಎಂ. ವೀರಪ್ಪ ಮೊಯ್ಲಿ, ಶ್ರೀ ಡಾಲಿ ಧನಂಜಯ, ಶ್ರೀ ಎನ್.ಎಸ್. ನಾಗಭೂಷಣ್ ಮೊದಲಾದವರುಗಳಿದ್ದಾರೆ (9 ಫೆಬ್ರವರಿ 2024)

ರೈತರ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ದೊರಕಬೇಕು ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯ್ಲಿಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 9.2.2024ರಂದು ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಮಾತನಾಡುತ್ತಾ ಕೃಷಿ ಅಭಿವೃದ್ಧಿಯ ಬಗ್ಗೆ ಸರ್ಕಾರಗಳ ನಿಲುವುಗಳು ಬದಲಾಗಬೇಕಿದೆ. ರೈತರ ಬದುಕನ್ನು ಹಸನಾಗಿಸಲು ಅವರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿದರೆ ಸಾಲದು, ನ್ಯಾಯಯುತವಾದ ಬೆಲೆ ಕೊಡಬೇಕು. ಕೃಷಿಕರೇ ರಾಷ್ಟ್ರದ ಬೆನ್ನೆಲುಬು. ಆದ್ದರಿಂದ ರೈತರಿಗೆ ಶಕ್ತಿ ತುಂಬುವಂತಹ ಕಾರ್ಯಕ್ರಮಗಳನ್ನು ರೂಪಿಸಿಬೇಕು ಎಂದು ಹೇಳಿದರು.

ವಿಧಾನಪರಿಷತ್ತಿನ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿರವರು ಸರ್ಕಾರಗಳು ರೈತಪರ ಕಾಳಜಿಯನ್ನು ಹೊಂದಬೇಕು. ರೈತರ ಆತ್ಮಹತ್ಯೆಗಳನ್ನು ತಡೆಯಬೇಕು. ಕೃಷಿ ಸಚಿವರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಸ್ವಾತಂತ್ರ್ಯವನ್ನು ನೀಡಬೇಕು ಎಂದರು.

ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಸುತ್ತೂರು ಶ್ರೀಗಳು ಕೃಷಿಕರಿಗೆ ಕೃಷಿ ವಿಜ್ಞಾನ ಕೇಂದ್ರದ ಮೂಲಕ ನೆರವು ನೀಡುವುದರ ಜೊತೆಗೆ ಜಾತ್ರಾ ಮಹೋತ್ಸವದಲ್ಲಿಯೂ ಕೃಷಿ ಮಾದರಿಗಳನ್ನು ನಿರ್ಮಿಸಿ ಕೃಷಿಗೆ ಒತ್ತು ನೀಡುವ ಕಾರ್ಯವನ್ನು ಮಾಡಿದ್ದಾರೆ ಎಂದು ತಿಳಿಸಿದರು.

ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ, ವಿಧಾನಸಭಾಧ್ಯಕ್ಷರಾದ ಶ್ರೀ ಯು.ಟಿ. ಖಾದರ್, ಶಾಸಕರುಗಳಾದ ಶ್ರೀ ಎ.ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಶ್ರೀ ಮರಿತಿಬ್ಬೇಗೌಡ, ಶ್ರೀ ಜಿ.ಡಿ. ಹರೀಶ್‌ಗೌಡ, ಶ್ರೀ ರಿಜ್ವಾನ್ ಅರ್ಷದ್, ಕಲಾವಿದರುಗಳಾದ ಶ್ರೀ ಡಾಲಿ ಧನಂಜಯ, ಶ್ರೀ ಎನ್.ಎಸ್. ನಾಗಭೂಷಣ, ಶ್ರೀ ಅಲೋಕ್‌ಕುಮಾರ್, ಶ್ರೀ ಎಂ. ಶಿವಣ್ಣ, ಶ್ರೀ ಗುರುದೇವ್ ನಾರಾಯಣಕುಮಾರ್, ಡಾ. ವಿ. ವೆಂಕಟಸುಬ್ರಮಣಿಯನ್, ಶ್ರೀ ಹೆಚ್.ಕೆ. ಮಂಜುನಾಥ್, ಮೊದಲಾದವರುಗಳು ಉಪಸ್ಥಿತರಿದ್ದರು. ಡಾ. ವೈ.ಬಿ. ಪ್ರಸಾದ್ ಸ್ವಾಗತಿಸಿದರು. ಡಾ. ಜಿ.ಎಂ. ವಿನಯ್ ವಂದಿಸಿದರು. ಶ್ರೀ ಮ.ಗು. ಬಸವಣ್ಣ ಕಾರ್ಯಕ್ರಮ ನಿರೂಪಿಸಿದರು.

## ಯುವಜನರಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಅಗತ್ಯವಿದೆ




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಮೇಳ, ಭಜನಾ ಮೇಳ ಹಾಗೂ ದನಗಳ ಜಾತ್ರೆಯ ಸಮಾರೋಪದಲ್ಲಿ ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಮಾತನಾಡುತ್ತಿರುವುದು. ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಬಿ. ದೇವೆಂದ್ರಪ್ಪ, ಡಾ. ಯತೀಂದ್ರ ಸಿದ್ದರಾಮಯ್ಯ, ದೇವನೂರು ಶ್ರೀಗಳು, ಕುಕ್ಕೆ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀಗಳು, ಡಾ. ಗೀತಾ ಮಹದೇವಪ್ರಸಾದ್ ಮೊದಲಾದವರುಗಳಿದ್ದಾರೆ (10 ಫೆಬ್ರವರಿ 2024)

ಯುವಜನರಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸುವ ಅಗತ್ಯವಿದೆ ಎಂದು ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 10.2.2024ರಂದು ಸಾಂಸ್ಕೃತಿಕ ಮೇಳ, ಭಜನಾ ಮೇಳ ಹಾಗೂ ದನಗಳ ಜಾತ್ರೆಯ ಸಮಾರೋಪದಲ್ಲಿ ಮಾತನಾಡುತ್ತಾ ಸಂಸ್ಕಾರ ಮತ್ತು ಸಂಸ್ಕೃತಿ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿವೆ. ಯುವಜನರಿಗೆ ಸಂಸ್ಕೃತಿಯನ್ನು ಕಲಿಸುವ ಮತ್ತು ಸಂಸ್ಕಾರವನ್ನು ನೀಡುವ ಅಗತ್ಯವಿದೆ. ನಮ್ಮ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಯತ್ತ ಆಕರ್ಷಿತರಾಗುತ್ತಿದ್ದಾರೆ. ನಮ್ಮತನವನ್ನು ಉಳಿಸುವ ಕೆಲಸವನ್ನು ಪೋಷಕರು ಮಾಡಬೇಕು ಎಂದು ಹೇಳಿದರು.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳು, ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಮಹಾಂತ ಸ್ವಾಮಿಗಳು, ಶಾಸಕರಾದ ಶ್ರೀ ಪಿ. ನರೇಂದ್ರಸ್ವಾಮಿ, ಶ್ರೀ ಬಿ. ದೇವೇಂದ್ರಪ್ಪ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಶ್ರೀಮತಿ ಪರಿಮಳಾ ನಾಗಪ್ಪ, ಡಾ. ಗೀತಾ ಮಹದೇವಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯನವರುಗಳು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀಮತಿ ಸವಿತಾ ವಂದಿಸಿದರು. ಶ್ರೀ ಹೆಚ್.ಎಸ್. ಸಿದ್ಧಮಲ್ಲಿಕಾರ್ಜುನಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

## ಕುಸ್ತಿ ಕ್ರೀಡೆಯನ್ನು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ

ಕುಸ್ತಿ ಕ್ರೀಡೆಯನ್ನು ಉಳಿಸಿ ಬೆಳೆಸಬೇಕಾದ ಅಗತ್ಯವಿದೆ ಎಂದು ಅರಣ್ಯ, ಪರಿಸರ ಮತ್ತು ಪರಿಸರ ವಿಜ್ಞಾನ ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 10.2.2024ರಂದು ಕುಸ್ತಿ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡುತ್ತಾ ಕುಸ್ತಿಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ಇದು ಸಾಂಪ್ರದಾಯಿಕ ಆತ್ಮರಕ್ಷಣಾ ಕಲೆಯಾಗಿದೆ. ಗರಡಿ ಮನೆಯಲ್ಲಿನ ಕಸರತ್ತು ನಮ್ಮ ಆರೋಗ್ಯವನ್ನು ಸದೃಢವಾಗಿಡುತ್ತದೆ ಎಂದು ಹೇಳಿದರು.

ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು, ಶ್ರೀ ಬಿ. ದೇವೇಂದ್ರಪ್ಪ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ವೈ.ಸಿ. ನಾಗೇಂದ್ರ,



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಚಿವರಾದ ಶ್ರೀ ಈಶ್ವರ್ ಬಿ. ಖಂಡ್ರೆಯವರು ಉದ್ಘಾಟಿಸಿದರು. ಪ್ರೊ. ಜಿ. ಹೇಮಂತಕುಮಾರ್, ಶ್ರೀ ಜ್ಞಾನಪ್ರಕಾಶ ಸ್ವಾಮಿಗಳು, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಬಿ. ದೇವೇಂದ್ರಪ್ಪ ಮೊದಲಾದವರುಗಳಿದ್ದಾರೆ (10 ಫೆಬ್ರವರಿ 2024)

ಪ್ರೊ. ಜಿ. ಹೇಮಂತಕುಮಾರ್ ಉಪಸ್ಥಿತರಿದ್ದರು. ಶ್ರೀ ಮಾದೇಶ್ ಸ್ವಾಗತಿಸಿದರು. ಶ್ರೀ ದೇವರಾಜಮೂರ್ತಿ ವಂದಿಸಿದರು. ಡಾ. ಸಿ.ಎಸ್. ಹೊನ್ನೇಗೌಡ ಕಾರ್ಯಕ್ರಮ ನಿರೂಪಿಸಿದರು.

## ಸುತ್ತೂರು ಶ್ರೀಮಠದ ನಿಸ್ವಾರ್ಥ ಸಾಮಾಜಿಕ ಸೇವಾಕಾರ್ಯ ಶ್ಲಾಘನೀಯ

ಸುತ್ತೂರು ಶ್ರೀಮಠದ ನಿಸ್ವಾರ್ಥ ಸಾಮಾಜಿಕ ಸೇವಾಕಾರ್ಯ ಶ್ಲಾಘನೀಯವಾದುದು ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ದಿನಾಂಕ 11.2.2024ರಂದು ನೂತನವಾಗಿ ನಿರ್ಮಿಸಿರುವ ಶ್ರೀಮತಿ ಪಾರ್ವತಮ್ಮ ಮತ್ತು ಡಾ. ಶ್ರೀ ಶಾಮನೂರು ಶಿವಶಂಕರಪ್ಪ ಅತಿಥಿಗೃಹ ಉದ್ಘಾಟಿಸಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡುತ್ತಾ ಶ್ರೀಮಠದ ಎಲ್ಲ ಪೀಠಾಧಿಪತಿಗಳು ಅನ್ನ, ಅಕ್ಷರ ಮತ್ತು ಆರೋಗ್ಯ ದಾಸೋಹಗಳನ್ನು ನಿಸ್ವಾರ್ಥವಾಗಿ ನಡೆಸಿಕೊಂಡು ಬಂದಿದ್ದಾರೆ. ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ಮಠದ ಸೇವೆಯನ್ನು ದೇಶ–ವಿದೇಶಗಳಿಗೂ ವಿಸ್ತರಿಸಿದ್ದಾರೆ. ಶ್ರೀಮಠದ ಆಶ್ರಯದಲ್ಲಿ 350ಕ್ಕೂ ಹೆಚ್ಚು ಸಂಸ್ಥೆಗಳು, ಇಪ್ಪತ್ತು ಸಾವಿರ ಸಿಬ್ಬಂದಿಗಳು ಹಾಗೂ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ. ಇವೆಲ್ಲವೂ ಉತ್ತಮವಾದ ಕಾರ್ಯಗಳು. ಆದರೆ ದಿವ್ಯಾಂಗರಿಗಾಗಿ ಒಂದು ಪಾಲಿಟೆಕ್ನಿಕನ್ನು ತೆರೆದು ನಡೆಸುತ್ತಿರುವ ಸೇವೆ ತೀರಾ ಪುಣ್ಯದ ಕೆಲಸವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಯೋಧ್ಯಾ ರಾಮಲಲ್ಲಾ ಮೂರ್ತಿಯ ಶಿಲ್ಪಿಗಳಾದ ಶ್ರೀ ಅರುಣ್ ಯೋಗಿರಾಜ್‌ರವರನ್ನು ಸನ್ಮಾನಿಸಲಾಯಿತು. ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ ವಿ. ಜೋಷಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ವಿರೋಧಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ,




ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಶಾಮನೂರು ಶಿವಶಂಕರಪ್ಪ ಅತಿಥಿಗೃಹವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಉದ್ಘಾಟಿಸಿ ಮಾತನಾಡಿದರು. ಶ್ರೀ ಸಿ.ಟಿ. ರವಿ, ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ಶ್ರೀ ಬಸವರಾಜ ಬೊಮ್ಮಯಿ ಹಾಗೂ ಶ್ರೀ ಆರ್. ಅಶೋಕ್‌ರವರುಗಳಿದ್ದಾರೆ (11 ಫೆಬ್ರವರಿ 2023)

ಮಾಜಿ ಸಚಿವರಾದ ಶ್ರೀ ಸಿ.ಟಿ. ರವಿ, ಮಾಜಿ ಸಂಸದರಾದ ಶ್ರೀ ಪ್ರಭಾಕರ್ ಕೋರೆಯವರುಗಳು ಉಪಸ್ಥಿತರಿದ್ದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

## ಸಾವಯವ ಕೃಷಿಗೆ ಹೆಚ್ಚಿನ ಒತ್ತು



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕೃಷಿಮೇಳವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ರೂಪಾಲಿ ನಾಯ್ಕ್, ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳು ಸಚಿವರಾದ ಶ್ರೀ ದಿನೇಶ್ ಗುಂಡೂರಾವ್, ಶ್ರೀ ಸಿ.ಎನ್. ಮಂಜೇಗೌಡ, ಶ್ರೀ ಆರ್. ಗಣೇಶ್, ಡಾ. ಪಿ.ಸಿ. ಕುಮಾರಸ್ವಾಮಿ ಮೊದಲಾದವರುಗಳಿದ್ದಾರೆ (6 ಫೆಬ್ರವರಿ 2024)

ಶ್ರೀಮಠ ಹಾಗೂ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ದಿನಾಂಕ 6.2.2024ರಂದು ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಏರ್ಪಡಿಸಿದ್ದ ಕೃಷಿಕರಿಗಾಗಿ ಸಾವಯವ ಕೃಷಿ ಮತ್ತು ಮೌಲ್ಯವರ್ಧನೆ ವಿಷಯ ಕುರಿತ ಚರ್ಚೆ ಮತ್ತು

ಸಂವಾದದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಾವಯವ ಕೃಷಿ ಕುರಿತು ತರಬೇತಿಗಳು ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರೈತರು ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಸಾವಯವ ಕೃಷಿ ಬಗ್ಗೆ ತರಬೇತಿ ಹಾಗೂ ಮಾಹಿತಿ ಪಡೆಯಬಹುದು ಎಂದು ಹೇಳಿದರು.

ಕನ್ನೇರಿಯ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರಸಕ್ತ ದಿನಗಳಲ್ಲಿ ಸಾವಯವ ಕೃಷಿಯ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ರೈತರು ಸಾವಯವ ಕೃಷಿ ಕಡೆಗೆ ಮುಖಮಾಡಿ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಬಹುದು. ಸಾವಯವ ಕೃಷಿಕರ ಅನೇಕ ಸಂಘ–ಸಂಸ್ಥೆಗಳು ರಾಜ್ಯದಲ್ಲಿವೆ. ಈ ಎಲ್ಲಾ ಸಾವಯವ ಸಂಘ–ಸಂಸ್ಥೆಗಳು ಒಂದೇ ಸೂರಿನಡಿ ಬಂದು ದೊಡ್ಡಮಟ್ಟದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು ಎಂದು ತಿಳಿಸಿದರು.

ವಿಜಯಪುರದ ಶ್ರೀ ತುಕಾರಾಂರವರು ಪದ್ಧತಿ ಪ್ರಾತ್ಯಕ್ಷಿಕೆಯ ಮೂಲಕ ಸ್ಥಳಿಯವಾಗಿ ದೊರಕುವ ಕೃಷಿ ತ್ಯಾಜ್ಯವಸ್ತುಗಳನ್ನು ಉಪಯೋಗಿಸಿಕೊಂಡು ಕೃಷಿ ಬೆಳೆಗಳಿಗೆ ಉಪಯೋಗಿಸುವ ವಿಗ್ರಗಂಧ ಕಷಾಯ, ಪುಷ್ಪರಸಾಯನ, ಕ್ಷೀರಪರ್ಣಿ ಕಷಾಯ, ಭೂಸಂಜೀವಿನಿ ರಸ ಹಾಗೂ ಇನ್ನಿತರ ಕಷಾಯಗಳನ್ನು ತಯಾರಿಸಿ ಕೃಷಿ ಭೂಮಿಗೆ ಉಪಯೋಗಿಸಿಕೊಂಡು ಸಾವಯವ ಕೃಷಿಯನ್ನು ಮಾಡುವ ಕುರಿತು ವಿವರಿಸಿದರು.

ಇದೇ ಸಂದರ್ಭದಲ್ಲಿ ಸಾವಯವ ಕೃಷಿಯಲ್ಲಿ ಹೆಚ್ಚು ಪ್ರಚಲಿತವಾಗಿ ಉಪಯೋಗಿಸುತ್ತಿರುವ ಗೋಕೃಪಾಮೃತವನ್ನು ರೈತರಿಗೆ ಉಚಿತವಾಗಿ ವಿತರಿಸಲಾಯಿತು.

ತೀರ್ಥಹಳ್ಳಿಯ ಸಾವಯವ ಕೃಷಿ ಪರಿವಾರ ಸಂಸ್ಥೆಯ ಶ್ರೀ ಆನಂದ್, ಗಟ್ಟವಾಡಿಪುರದ ಶ್ರೀ ಶಿವಕುಮಾರಸ್ವಾಮಿ, ಕೊಳ್ಳೇಗಾಲ ತಾಲ್ಲೂಕು ದೊಡ್ಡಿಂದುವಾಡಿಯ ಶ್ರೀ ಕೈಲಾಸಮೂರ್ತಿ, ಮೈಸೂರಿನ ಶ್ರೀ ವೇಣುಗೋಪಾಲ್, ತುಮಕೂರಿನ ಶ್ರೀ ಕಾರ್ತಿಕ್‌ರವರುಗಳು ತಾವು ಕೈಗೊಂಡಿರುವ ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಸಾವಯವ ಕೃಷಿ ಮಾಡುತ್ತಿರುವ ರೈತರುಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಒಂದು ದೇಶದ ಭವಿಷ್ಯ ಆ ದೇಶದ ಶೈಕ್ಷಣಿಕ ಗುಣಮಟ್ಟವನ್ನು ಅವಲಂಬಿಸಿದೆ

ಒಂದು ದೇಶದ ಭವಿಷ್ಯ ಆ ದೇಶದ ಶೈಕ್ಷಣಿಕ ಗುಣಮಟ್ಟವನ್ನು ಅವಲಂಬಿಸಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ಡಿ. ಆನಂದ್‌ರವರು ಹೇಳಿದರು.

**ಸುತ್ತೂರಿನ ಜೆಎಸ್‌ಎಸ್ ಬಿಇಡಿ ಕಾಲೇಜಿನಲ್ಲಿ** ದಿನಾಂಕ 28.2.2024ರಂದು ನಡೆದ ವಿದ್ಯಾರ್ಥಿ ಸಂಘಗಳ ಉದ್ಘಾಟನೆ ಮತ್ತು ಪರಿಚಯಾತ್ಮಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಒಂದು ದೇಶದ ಭವಿಷ್ಯ ಆ ದೇಶದ ಶೈಕ್ಷಣಿಕ ಗುಣಮಟ್ಟವನ್ನು ಅವಲಂಬಿಸಿದೆ. ಶಿಕ್ಷಣ ಕ್ಷೇತ್ರಕ್ಕೆ ಯುವ ಶಕ್ತಿಯ ಕೊಡುಗೆ ಅಪಾರ. ಬಹುತೇಕ ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದಂತಹ ಪ್ರಶಿಕ್ಷಣಾರ್ಥಿಗಳು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಶಿಕ್ಷಕ ವೃತ್ತಿಯು ಸಮಾಜ ಕಟ್ಟುವ ಕೆಲಸ ಮಾಡುತ್ತದೆ. ಹಾಗಾಗಿ ಶಿಕ್ಷಕ ವೃತ್ತಿ ಕೇವಲ ವೃತ್ತಿಯಲ್ಲ. ಅದೊಂದು ಸಮರ್ಪಣಾ ಮನೋಭಾವ. ಆದ್ದರಿಂದ ನಾವು ನೀಡುವ ಶಿಕ್ಷಣವು ಗುಣಮಟ್ಟ ಮತ್ತು ಮೌಲ್ಯಯುತವಾಗಿರಬೇಕು ಎಂದರು.

ಪ್ರಾಂಶುಪಾಲರಾದ ಡಾ. ಮಹೇಶ್ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ.ವಿ. ಯೋಗೇಶ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ಕಾಲೇಜಿನಿಂದ ಪ್ರಕಟವಾಗುವ 'ಗೋಪ' (ಗೋಡೆ ಪತ್ರಿಕೆ)ವನ್ನು ಬಿಡುಗಡೆ ಮಾಡಲಾಯಿತು. ಪಿಹೆಚ್.ಡಿ. ಪದವಿಯನ್ನು ಗಳಿಸಿದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಬಿ.ಜೆ. ಆದರ್ಶರವರನ್ನು ಸನ್ಮಾನಿಸಲಾಯಿತು.

ಕು. ಸರ್ವಮಂಗಳ ಮತ್ತು ತಂಡ ಪ್ರಾರ್ಥಿಸಿದರು. ಕು. ರಮ್ಯ ಸ್ವಾಗತಿಸಿದರು. ಶ್ರೀ ಭರತ್‌ರಾಜ್ ಗೌತಮ್ ವಂದಿಸಿದರು, ಶ್ರೀಮತಿ ಮಾಲಾ ಕಾರ್ಯಕ್ರಮ ನಿರೂಪಿಸಿದರು.

## ಶ್ರೀ ಸುತ್ತೂರು ಮಠ ನಿಜವಾದ ಸಾಧಕರನ್ನು ಗುರುತಿಸಿ ಗೌರವಿಸುತ್ತಿದೆ



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ ಶೂನ್ಯಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ, ಪ್ರಸಾದ ವರ್ಗೀಕೃತ ಪರಿಷ್ಕೃತ ಲೇಖನಸೂಚಿ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜನ್ಮಶತಮಾನೋತ್ಸವ ವಿಚಾರಸಂಕಿರಣ ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆ ಮಾಡಲಾಯಿತು. ಶ್ರೀ ಎ. ಕಿರಣ್ ಸುಬ್ಬಯ್ಯ, ಪ್ರೊ. ಎನ್.ಕೆ. ಲೋಕನಾಥ್, ಶ್ರೀ ಯೋಗಿ ಶ್ರೀನಿವಾಸ ಅರ್ಕ, ಪ್ರೊ. ಶರಣಪ್ಪ ವಿ. ಹಲಸೆ, ಡಾ. ಡಿ.ಎ. ಶಂಕರ್, ಡಾ. ಎಚ್.ಎಸ್. ಅನುಪಮಾ, ಡಾ. ಕವಿತಾ ರೈ, ಶ್ರೀಮತಿ ರಾಜೇಶ್ವರಿ ಗಡಕರರವರುಗಳಿದ್ದಾರೆ (29 ಫೆಬ್ರವರಿ 2024)

ಶ್ರೀ ಸುತ್ತೂರು ಮಠ ಪ್ರತಿವರ್ಷವೂ ನಿಜವಾದ ಸಾಧಕರನ್ನು ಗುರುತಿಸಿ ಗೌರವಿಸುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್‌ರವರು ಹೇಳಿದರು.

**ಮೈಸೂರಿನ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ** ದಿನಾಂಕ 29.2.2024ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೃತಿಗಳ ಲೋಕಾರ್ಪಣೆ ಹಾಗೂ ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ಮಾತನಾಡುತ್ತಾ ಸಾಹಿತ್ಯ, ಕಲೆ ಹಾಗೂ ಸಂಗೀತ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಸನ್ಮಾನಿಸುವ ಸಂಪ್ರದಾಯ ಪ್ರೋತ್ಸಾಹದಾಯಕವಾದುದು. ಇದರಿಂದ ಸಾಧಕರಿಗೆ ತಮ್ಮ ಕ್ಷೇತ್ರಗಳಲ್ಲಿ ಇನ್ನಷ್ಟು ಕೆಲಸ ಮಾಡಲು ಸ್ಫೂರ್ತಿ ಮತ್ತು ಪ್ರೇರಣೆ ದೊರೆಯುತ್ತದೆ. ಪ್ರಶಸ್ತಿ ಪುರಸ್ಕೃತರ ಸೇವೆಯಿಂದ ಸಮಾಜಕ್ಕೆ ಲಾಭ ದೊರೆಯುತ್ತದೆ. ಸಾಧಕರು ನಿರಂತರವಾಗಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಇದರಿಂದ ಸಮಾಜ ಜೀವಂತವಾಗಿರುತ್ತದೆ. ಅಂತಹವರು ನಿರಂತರವಾಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಇಂತಹ ಪ್ರಶಸ್ತಿಗಳು ಸಹಾಯ ಮಾಡುತ್ತವೆ. ಶ್ರೀಮಠದಿಂದ ನೀಡುವ ಪ್ರಶಸ್ತಿಗಳಿಗೆ ಸಮಾಜದಲ್ಲಿ ಬಹಳ ಮಹತ್ವವಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಅಕ್ಕಮಹಾದೇವಿಯವರು ಲೌಕಿಕದಿಂದ ಅಧ್ಯಾತ್ಮಿಕ ಆಕರ್ಷಿತರಾಗಿ, ಇಡೀ ಬದುಕನ್ನು ಧ್ರುವೀಕರಿಸಿ ನಡೆದಿದ್ದು ಆಶ್ಚರ್ಯಕರ ಸಂಗತಿ. ಯಾವುದರ ಆಶ್ರಯ ಮತ್ತು ಬೆಂಬಲವಿಲ್ಲದೇ ಪ್ರಕೃತಿಯನ್ನೇ ನಂಬಿದ್ದರು. ಅವರ ಆತ್ಮಸ್ಥೈರ್ಯವು ಆಶ್ಚರ್ಯವನ್ನುಂಟು ಮಾಡುವಂಥದ್ದು. ಅವರ ಪಾವಿತ್ರ್ಯ, ಮನೋಸ್ಥೈರ್ಯವನ್ನು ಇಡೀ ಶರಣ ಸಮುದಾಯಕ್ಕೆ ಪರಿಚಯ ಮಾಡುವುದು ಅಲ್ಲಮಪ್ರಭುವಿನ ಮೂಲ ಉದ್ದೇಶವಾಗಿತ್ತು. ಅಕ್ಕಮಹಾದೇವಿವರ ಬದುಕು ವಾಸ್ತವವಾಗಿ ಹೇಗಿರಬಹುದು ಎಂಬುದನ್ನು ಡಾ. ಎಚ್.ಎಸ್. ಅನುಪಮಾರವರು ಪರಿಚಯಿಸಿದ್ದಾರೆ. ಶ್ರೀ ಎ. ಕಿರಣ್ ಸುಬ್ಬಯ್ಯ ಮತ್ತು ಶ್ರೀ ಪ್ರಕಾಶ್ ಗಡಕರರವರು ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ಅಪಾರ ಸಾಧನೆಯನ್ನು ಮಾಡಿದ್ದಾರೆ ಅವರೆಲ್ಲರೂ ಈ ಪ್ರಶಸ್ತಿಗಳಿಗೆ ಅರ್ಹರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಎಚ್.ಎಸ್. ಅನುಪಮಾರವರಿಗೆ 2022ನೇ ಸಾಲಿನ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಶ್ರೀ ಎ. ಕಿರಣ್ ಸುಬ್ಬಯ್ಯನವರಿಗೆ ಶ್ರೀ ಎಂ. ವೀರಪ್ಪದತ್ತಿ ಪ್ರಶಸ್ತಿ ದಿ. ಶ್ರೀ ಪ್ರಕಾಶ ಗಡಕರರವರಿಗೆ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೆಎಸ್‌ಎಸ್ ಗ್ರಂಥಮಾಲೆಯಿಂದ ಪ್ರಕಟವಾಗಿರುವ ಶೂನ್ಯಸಂಪಾದನೆ ಆಫ್ ಶಿವಗಣಪ್ರಸಾದಿ ಮಹದೇವಯ್ಯ, ಪ್ರಸಾದ ವರ್ಗೀಕೃತ ಪರಿಷ್ಕೃತ ಲೇಖನಸೂಚಿ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ಜನ್ಮಶತಮಾನೋತ್ಸವ ವಿಚಾರಸಂಕಿರಣ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಸೆಂಟರ್ ಫಾರ್ ಕಾನ್ಸಿಯಸ್ ಅವೇರ್‌ನೆಸ್ ಅರ್ಕ ಫೌಂಡೇಶನ್ನಿನ ಸಂಸ್ಥಾಪಕರಾದ ಶ್ರೀ ಯೋಗಿ ಶ್ರೀನಿವಾಸ ಅರ್ಕರವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ, ಲೇಖಕರಾದ ಡಾ. ಡಿ.ಎ. ಶಂಕರ್, ಡಾ. ಎಚ್.ಎಸ್. ಅನುಪಮಾ ಮಾತನಾಡಿದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಕ್ಕಮಹಾದೇವಿ ಸಂಶೋಧನಾ ಪೀಠದ ನಿರ್ದೇಶಕರಾದ ಡಾ. ಕವಿತಾ ರೈಯವರು ಕೃತಿಗಳನ್ನು ಪರಿಚಯಿಸಿದರು. ಶ್ರೀ ಕಲಾನಿಕೇತನ ದೃಶ್ಯಕಲಾ ಕಾಲೇಜಿನ ಉಪನ್ಯಾಸಕರಾದ ಡಾ. ವಿಠ್ಠಲರೆಡ್ಡಿ ಎಫ್. ಚುಳಕಿಯವರು ಪ್ರಶಸ್ತಿಪುರಸ್ಕೃತರ ಪರಿಚಯ ಮಾಡಿದರು. ಜೆಎಸ್‌ಎಸ್ ಲಲಿತಕಲಾ ವೃಂದದ ಶ್ರೀಮತಿ ರೂಪ ಗುರುಪ್ರಸಾದ್, ಶ್ರೀಮತಿ ವಿನುತ ಕಾಂತರಾಜು ಪ್ರಾರ್ಥಿಸಿದರು. ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಶ್ರೀ ಕೆ.ಎಲ್. ರೇವಣ್ಣಸ್ವಾಮಿ, ಶ್ರೀ ಆರ್.ಎಸ್. ಪೂರ್ಣಾನಂದ, ಶ್ರೀ ಎನ್.ಆರ್. ಶಿವಕುಮಾರರವರುಗಳ ಸ್ವಸ್ತಿವಾಚನ ಮಾಡಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

## ಜಾತ್ರಾ ಮಹೋತ್ಸವದಲ್ಲಿ ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ **ಜೆಎಸ್‌ಎಸ್ ಶಾಲಾ ಶಿಕ್ಷಣ ವಿಭಾಗದ ವತಿಯಿಂದ** ಏರ್ಪಡಿಸಲಾಗಿದ್ದ ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನದ ಒಟ್ಟು 10 ವಿಭಾಗಗಳಲ್ಲಿ ಭೌತಶಾಸ್ತ್ರದಲ್ಲಿ 29 ಮತ್ತು ಗಣಿತ ವಿಭಾಗದಲ್ಲಿ 12 ಮಾದರಿಗಳನ್ನು ವಿದ್ಯಾರ್ಥಿಗಳು ತಯಾರಿಸಿದ್ದರು.

ಜಯನಗರ ಶಾಲೆಯ ವಿದ್ಯಾರ್ಥಿಗಳು ತಾವು ತಯಾರಿಸಿದ್ದ ಚಂದ್ರಯಾನ–3 ಮಾದರಿಯ ಮೂಲಕ ರಾಕೆಟ್ ಉಡಾವಣೆ, ವಿಕ್ರಂ ಲ್ಯಾಂಡರ್ ಹಾಗೂ ಪ್ರಗ್ಯಾನ್ ರೋವರ್‌ನ ಕಾರ್ಯವಿಧಾನದ ಬಗ್ಗೆ ಪ್ರಾಯೋಗಿಕವಾಗಿ ತಿಳಿಸಿದರು. ತಾಳವಾಡಿ ಶಾಲೆಯ ವಿದ್ಯಾರ್ಥಿಗಳು ತಯಾರಿಸಿದ್ದ ಮಾದರಿ ಮೂಲಕ ಖಗೋಳ ಶಾಸ್ತ್ರ ಮತ್ತು ಜ್ಯೋತಿಷ್ಯ ಎರಡರಲ್ಲೂ ನಕ್ಷತ್ರ ರಾಶಿಗಳ ಮಹತ್ವದ ಬಗ್ಗೆ ತಿಳಿಸಿದರು. ಸರಗೂರು ಶಾಲೆಯ ವಿದ್ಯಾರ್ಥಿಗಳು ಮಾದರಿ ಮೂಲಕ ತಾವು ತಯಾರಿಸಿರುವ ದ್ಯುತಿ ಪೆಟ್ಟಿಗೆ ಎಂಬ ಮಾದರಿಯ ಮೂಲಕ ಬೆಳಕಿನ ಸ್ವಭಾವ, ಪೀನ ಮತ್ತು ನಿಮ್ನ ಮಸೂರ ಹಾಗೂ ಪೀನ ಮತ್ತು ನಿಮ್ನ ದರ್ಪಣಗಳ ಲಕ್ಷಣಗಳ ಬಗ್ಗೆ ವಿವರಿಸಿದರು. ಉಮ್ಮತ್ತೂರು ಶಾಲೆಯ ವಿದ್ಯಾರ್ಥಿಗಳು ಸರಳ ಪ್ರೊಜೆಕ್ಟರ್ ಎಂಬ ಮಾದರಿಯ

ಮೂಲಕ ಮಾನವನ ಮೆದುಳು, ಗ್ರಂಥಿಗಳು, ಸಸ್ಯದ ವಿವಿಧ ಭಾಗಗಳನ್ನು ಪ್ರದರ್ಶಿಸಿದರು.

ಸುತ್ತೂರು ಶಾಲೆಯ ವಿದ್ಯಾರ್ಥಿಗಳು ಲೇಸರ್ ಆಧಾರಿತ ಭದ್ರತಾ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಕಾಮಗೆರೆ ಶಾಲೆಯ ವಿದ್ಯಾರ್ಥಿಗಳು ಅಂಧ ವ್ಯಕ್ತಿಗಳಿಗೆ ಅನುಕೂಲವಾಗುವಂತಹ ಸ್ಮಾರ್ಟ್ ಬ್ಲೈಂಡ್ ಸ್ಟಿಕ್ ಮಾದರಿಯನ್ನು ತಯಾರಿಸಿ ಉತ್ತಮ ರೀತಿಯಲ್ಲಿ ವಿವರಿಸುತ್ತಿದ್ದುದು ವೀಕ್ಷಕರನ್ನು ತನ್ನತ್ತ ಆಕರ್ಷಿಸಿತು.

## ಮೂವರಿಗೆ ಭಾರತರತ್ನ ಅರ್ಥಪೂರ್ಣ



ಸಾಂದರ್ಭಿಕ ಚಿತ್ರ

ಭಾರತ ಸರ್ಕಾರವು ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವವಾದ 'ಭಾರತರತ್ನ' ಪುರಸ್ಕಾರವನ್ನು ಮೂವರು ಪ್ರಾತಃಸ್ಮರಣೀಯರಿಗೆ ನೀಡಿರುವುದು ಅತ್ಯಂತ ಸಂತೋಷದ ಸಂಗತಿ.

ಮಾಜಿ ಪ್ರಧಾನಿ ದಿವಂಗತ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಬಲಗೈಯಾಗಿ ದುಡಿದ ಶ್ರೀ ಅಡ್ವಾಣಿಯವರು ನಿಷ್ಕಾಮಕರ್ಮಕ್ಕೆ ಭಾಷ್ಯದಂತೆ ಇರುವವರು. ಭಾರತೀಯ ಜನತಾ ಪಕ್ಷದ ಪುನರುಜ್ಜೀವನದಲ್ಲಿ ಅವರು ಕೈಗೊಂಡ ರಥಯಾತ್ರೆ ಒಂದು ಪ್ರಮುಖ ಘಟ್ಟ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಿರುವ ಶುಭಯಜ್ಞದ ರೂವಾರಿಗಳು ಅವರೇ ಎಂದರೆ ತಪ್ಪಾಗಲಾರದು. ರಾಜಕೀಯದ ಏಳುಬೀಳುಗಳು ಅವರನ್ನು ಎಂದೂ ಕುಗ್ಗಿಸಲಿಲ್ಲ. ಯಾರ ವಿರುದ್ಧವೂ ಅವರು ಕೆಟ್ಟ ಮಾತುಗಳನ್ನಾಡಲಿಲ್ಲ. ರಾಷ್ಟ್ರಭಕ್ತಿಯನ್ನೇ ಉಸಿರಾಗಿಸಿಕೊಂಡ ಅವರು ಸ್ಥಿತಪ್ರಜ್ಞತೆಯನ್ನು, ಸಮಚಿತ್ತತೆಯನ್ನು ಸದಾಕಾಲವೂ ಕಾಯ್ದುಕೊಂಡು ಬಂದ ವಿವೇಕಶಾಲಿಗಳು. ಸಂದುಹೋದ ಮೌಲ್ಯಗಳ ಒಂದು ತಲೆಮಾರಿನ ಜೀವಂತ ಪ್ರತಿನಿಧಿ ಅವರು. ಇಂಥ ಭಾರತಾಂಬೆಯ ಸುಪುತ್ರನಿಗೆ ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವ ಲಭಿಸಿರುವುದು ಅಭಿಮಾನದ ವಿಷಯ. ಅವರು ಶ್ರೀಮಠದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು, ಆ ಸಂದರ್ಭಗಳಲ್ಲಿ ತೋರಿದ ಸರಳತೆ, ಆತ್ಮೀಯತೆ, ಅಭಿಮಾನಗಳು ನಮ್ಮ ಮನಸ್ಸಿನಲ್ಲಿ ಇಂದೂ ಹಸಿರಾಗಿವೆ.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕಾರ್ಯಕ್ರಮವೊಂದರಲ್ಲಿ ಡಾ. ಎಂ.ಎಸ್. ಸ್ವಾಮಿನಾಥನ್‌ರವರು ಭಾಗವಹಿಸಿದ್ದ ಸಾಂದರ್ಭಿಕ ಚಿತ್ರ.

ಶ್ರೀ ಪಿ.ವಿ. ನರಸಿಂಹರಾವ್‌ರವರು ಭಾರತವನ್ನು ಹೊಸ ಆರ್ಥಿಕತೆಯ ಯುಗಕ್ಕೆ ಕೊಂಡೊಯ್ದ ಧೀಮಂತರು. ಸುಮಾರು ಹದಿನಾಲ್ಕು ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ್ದರು, ಮುತ್ಸದ್ದಿಗಳಾಗಿದ್ದರು. ಡಾ. ಮನಮೋಹನ ಸಿಂಗ್‌ರಂಥ ಆರ್ಥಿಕ ತಜ್ಞರನ್ನು ಸಚಿವಸಂಪುಟಕ್ಕೆ ಸೇರಿಸಿಕೊಳ್ಳುವಂಥ ದೂರದೃಷ್ಟಿ ಉಳ್ಳವರಾಗಿದ್ದವರು. ಚೌಧರಿ ಚರಣ್‌ಸಿಂಗ್‌ರವರು ಕೃಷಿ ಸಮುದಾಯದ ಜನತೆಯನ್ನು ಒಟ್ಟುಗೂಡಿಸಿ ಒಂದು ಹೊಸ ರಾಜಕೀಯ ಸಮೀಕರಣವನ್ನು ಸಾಧಿಸಿದ್ದರು. ಅನಂತರ ಕೆಲವು ಕಾಲ ಭಾರತದ ಪ್ರಧಾನಮಂತ್ರಿಗಳೂ ಆಗಿ ನವಮನ್ವಂತರಕ್ಕೆ ನಾಂದಿ ಹಾಡಿದ್ದರು.

ಡಾ. ಎಂ.ಎಸ್. ಸ್ವಾಮಿನಾಥನ್‌ರವರು ಆಧುನಿಕ ಭಾರತದ ಹಸಿರು ಕ್ರಾಂತಿಯ ಹರಿಕಾರರೆಂದೇ ಖ್ಯಾತರಾಗಿದ್ದರು. ಅಂತಾರಾಷ್ಟ್ರೀಯ ಮಟ್ಟದ ಕೃಷಿವಿಜ್ಞಾನಿಗಳಾಗಿದ್ದ ಅವರ ಸಂಶೋಧನೆಗಳ ಫಲವಾಗಿ ಇಂದು ಭಾರತ ಆಹಾರ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಸಾಧಿಸುವಂತಾಗಿದೆ. ಅವರು ಕೊನೆಯ ದಿನಗಳಲ್ಲಿ ಸಮಾರಂಭವೊಂದರಲ್ಲಿ 'ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುವ ದೇಶಗಳಿಗೆ ಉತ್ತಮ ಭವಿಷ್ಯವಿದೆಯೇ ಹೊರತು ಬಂದೂಕುಗಳನ್ನು ತಯಾರಿಸುವ ದೇಶಗಳಿಗಲ್ಲ. ನಮ್ಮ ಯುವಕರು ಶ್ರಮದಾಯಕವೆಂದು, ಲಾಭದಾಯಕವಲ್ಲವೆಂದು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಉತ್ಸಾಹ ತೋರುತ್ತಿಲ್ಲ. ಬಂದೂಕುಗಳನ್ನು ಕೊಳ್ಳಬಹುದು ಆದರೆ ಆಹಾರಧಾನ್ಯಗಳನ್ನು ಕೊಳ್ಳಲಾಗುವುದಿಲ್ಲ' ಎಂದು ಹೇಳಿದ್ದ ಈ ಮಾತುಗಳು ಇಡೀ ಜಗತ್ತೇ ಗಮನಿಸಬೇಕಾದುದಾಗಿದೆ. ಡಾ. ಎಂ.ಎಸ್. ಸ್ವಾಮಿನಾಥನ್‌ರವರು ಶ್ರೀ ಸುತ್ತೂರು ಮಠಕ್ಕೆ ಹಾಗೂ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿದ್ದುದು ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿರಾಗಿಯೇ ಇದೆ.

ಭಾರತದ ಈ ಮೂವರು ಸಾಧಕರಿಗೆ ಅವರ ಅಭೂತಪೂರ್ವ ಸಾಧನೆಗಳಿಗಾಗಿ 'ಭಾರತ ರತ್ನ' ಪುರಸ್ಕಾರ ನೀಡಿರುವುದು ದೇಶದ ಕೃತಜ್ಞತೆಯ ಸಂಕೇತವಾಗಿದೆ. ನಿಜವಾದ ಸಾಧಕರಿಗೆ ಗೌರವ ತಲುಪಿರುವುದು ಅಭಿಮಾನದ ಸಂಗತಿ. ಈ ಹಿರಿಯರಿಗೆ ಗೌರವ ನೀಡಿದ ಭಾರತ ಸರ್ಕಾರಕ್ಕೆ ಅಭಿನಂದನೆಗಳು ಸಲ್ಲಬೇಕು.

**– ಪರಮಪೂಜ್ಯ ಜಗದ್ಗುರು**
**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

## ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ಕಾರ್ಯ ಶ್ಲಾಘನೀಯ



ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ಗೆ ಫೆಬ್ರವರಿ 24ರಂದು ಎಐಸಿಟಿಇಯ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು) ಅಧ್ಯಕ್ಷರಾದ ಡಾ. ಟಿ.ಜಿ. ಸೀತಾರಾಮ್‌ರವರು ಹಾಗೂ ಅವರ ಧರ್ಮಪತ್ನಿಯವರು ಭೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾರ್ದಿಕವಾಗಿ ಸ್ವಾಗತಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ವಿಶೇಷಚೇತನ ವಿದ್ಯಾರ್ಥಿಗಳಿಗಾಗಿ ತಾಂತ್ರಿಕ ಶಿಕ್ಷಣವನ್ನು ನೀಡಲು ಸ್ಥಾಪಿಸಿರುವ ಪಾಲಿಟೆಕ್ನಿಕ್‌ನ ಕಾರ್ಯ ಶ್ಲಾಘನೀಯವಾದುದು ಎಂದು ಎಐಸಿಟಿಇಯ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ) ಅಧ್ಯಕ್ಷರಾದ ಡಾ. ಟಿ.ಜಿ. ಸೀತಾರಾಮ್‌ರವರು ಹೇಳಿದರು.

**ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ಗೆ** ದಿನಾಂಕ 24.2.2024ರಂದು ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡುತ್ತಾ ವಿಶೇಷಚೇತನರಿಗೆ ತಾಂತ್ರಿಕ ಶಿಕ್ಷಣ ನೀಡುತ್ತಿರುವ ಇಂತಹ ಕಾರ್ಯ ಶ್ರೇಷ್ಠ ಮಟ್ಟದ್ದಾಗಿದೆ. ಇದು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ವಿಶೇಷಚೇತನರಿಗಾಗಿ ಆರಂಭವಾಗಿರುವ ಸಂಸ್ಥೆಯೆಂದು ತಿಳಿದು ಸಂತೋಷವಾಯಿತು. ವಿಶೇಷಚೇತನರು ಸಮಾಜದಲ್ಲಿ ನೆಮ್ಮದಿ ಮತ್ತು ಗೌರವಯುತ ಜೀವನ ನಡೆಸಲು ಎಐಸಿಟಿಇ ಎಲ್ಲ ರೀತಿಯಿಂದಲೂ ಬೆಂಬಲ ನೀಡಲು ಬದ್ಧವಾಗಿದೆ. ಜೆಎಸ್‌ಎಸ್ ಸಂಸ್ಥೆಯು ವಿಶೇಷಚೇತನರಿಗಾಗಿ ಈ ಸಂಸ್ಥೆಯಲ್ಲಿ ಹಮ್ಮಿಕೊಳ್ಳುವ ಎಲ್ಲ ಕಾರ್ಯಗಳಿಗೂ ಎಇಸಿಟಿಇಯಿಂದ ಸಹಕಾರ ನೀಡಲಾಗುವುದು. ಪ್ರತಿಭಾನ್ವಿತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಎಐಸಿಟಿಇ ಅನುಮೋದಿತ ಸಂಸ್ಥೆಗಳಲ್ಲಿ ವಿಶೇಷ ಸೂಪರ್‌ನ್ಯೂಮರರಿ ಕೋಟಾದಡಿ ಅವಕಾಶವಿರುತ್ತದೆ. ಯಾವುದೇ ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಅವರು ಪಡೆಯುವ ಶಿಕ್ಷಣದಲ್ಲಿ ಅವಕಾಶಗಳು ಅಥವಾ ತಂತ್ರಜ್ಞಾನಗಳಲ್ಲಿ ಯಾವುದೇ ಸಮಸ್ಯೆಗಳನ್ನು ಎದುರಿಸಿದರೆ, ಅದಕ್ಕೆ ರಾಷ್ಟ್ರಮಟ್ಟದ ಹ್ಯಾಕಥಾನ್‌ನಲ್ಲಿ ಪರಿಹಾರ ಕಂಡುಕೊಳ್ಳಬಹುದೆಂದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಅವರು ಪಾಲಿಟೆಕ್ನಿಕ್‌ನ ತರಗತಿಗಳು ಮತ್ತು ಪ್ರಯೋಗಾಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಅಧ್ಯಯನ ಹಾಗೂ ಸಿದ್ಧಪಡಿಸಿರುವ ವಿವಿಧ ಮಾದರಿಗಳ ಬಗ್ಗೆ ಮಾಹಿತಿ ಪಡೆದರು. ಅಧ್ಯಾಪಕರುಗಳು ಸಂಜ್ಞಾ ಭಾಷೆ ಮೂಲಕ ತರಬೇತಿ ನೀಡುತ್ತಿರುವುದನ್ನು ಪ್ರಶಂಸಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಮಹಾವಿದ್ಯಾಪೀಠದ ಅಧಿಕಾರಿಗಳು, ಪ್ರಾಂಶುಪಾಲರು ಹಾಗೂ ಆಧ್ಯಾಪಕರುಗಳು ಪಾಲ್ಗೊಂಡಿದ್ದರು.

## ಶ್ರೀ ಸುತ್ತೂರು ಕ್ಷೇತ್ರದಲ್ಲಿ ರಥಸಪ್ತಮಿಯಂದು 108 ಸೂರ್ಯ ನಮಸ್ಕಾರ



ಸುತ್ತೂರಿನ ಜೆಎಸ್‌ಎಸ್ ಶಾಲೆಯಲ್ಲಿ ಮೈಸೂರಿನ ಅಷ್ಟಾಂಗ ಯೋಗ ಶಾಲೆಯ ಸಹಯೋಗದೊಂದಿಗೆ ರಥಸಪ್ತಮಿಯಂದು ವಿದೇಶಗಳ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳು 108 ಸೂರ್ಯನಮಸ್ಕಾರ ಮಾಡಿದರು.

**ಸುತ್ತೂರಿನ ಜೆಎಸ್‌ಎಸ್ ಶಾಲೆಯಲ್ಲಿ** ಮೈಸೂರಿನ ಅಷ್ಟಾಂಗ ಯೋಗ ಶಾಲೆಯ ಸಹಯೋಗದೊಂದಿಗೆ ಐದುನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ 108 ಸೂರ್ಯ ನಮಸ್ಕಾರಗಳನ್ನು ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಷ್ಟಾಂಗ ಯೋಗ ಶಾಲೆಯ ಡಾ. ರಮೇಶ್ ಶೆಟ್ಟಿಯವರು ಇಡೀ ಜಗತ್ತಿಗೆ ಬೆಳಕು ಮತ್ತು ಜೀವಕಾಂತಿಯನ್ನು ನೀಡುವ ಸೂರ್ಯದೇವ ಆಗಿಂದಾಗ್ಗೆ ತನ್ನ ಪಥ ಬದಲಾಯಿಸುತ್ತಿರುತ್ತಾನೆ. ಇದನ್ನೇ ರಥಸಪ್ತಮಿ ಎಂದು ಕರೆಯುತ್ತಾರೆ. ಸೂರ್ಯ ನಮಸ್ಕಾರ ಮಾಡುವುದರಿಂದ ವ್ಯಕ್ತಿಯು ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಸಾಧ್ಯ. ಹೀಗಾಗಿ ಋಷಿಮುನಿಗಳು, ಹಿರಿಯರು ಸೂರ್ಯ ನಮಸ್ಕಾರವನ್ನು ದೈನಂದಿನ ಚಟುವಟಿಕೆಯ ಒಂದು ಭಾಗವಾಗಿಸಿಕೊಂಡಿದ್ದರು. ಆದ್ದರಿಂದ ವಿದ್ಯಾರ್ಥಿಗಳು ಪ್ರತಿನಿತ್ಯ ಸೂರ್ಯನಮಸ್ಕಾರವನ್ನು ಮಾಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್, ಅಷ್ಟಾಂಗ ಯೋಗ ಶಾಲೆಯ ವಿದೇಶಿ ಶಿಷ್ಯವೃಂದದವರು, ಹೆಚ್ಚುವರಿ ಸಂಯೋಜನಾಧಿಕಾರಿಗಳಾದ ಶ್ರೀ ಸಂಪತ್ತು, ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯ, ಉಪನ್ಯಾಸಕರಾದ ಶ್ರೀ ಗುರುಶಾಂತಪ್ಪ ನಿಡವಣಿ, ಮೊದಲಾದವರು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಜ್ಞಾನದ ಜೊತೆಗೆ ಮಾನವೀಯತೆಯನ್ನೂ ಬೆಳೆಸಿಕೊಳ್ಳಬೇಕು

ವಿದ್ಯಾರ್ಥಿಗಳು ಜ್ಞಾನದ ಜೊತೆಗೆ ಮಾನವೀಯತೆಯನ್ನೂ ಬೆಳೆಸಿಕೊಳ್ಳಬೇಕು ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಸಿ.ಜಿ. ಸೀತಾರಾಮ್‌ರವರು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 24.2.2024ರಂದು ನಡೆದ **ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ** 6ನೆಯ ಘಟಿಕೋತ್ಸವದಲ್ಲಿ ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳು ತಾಂತ್ರಿಕ ಜ್ಞಾನದ ಜೊತೆಗೆ ಮಾನವೀಯತೆ ಮತ್ತು ಕೌಶಲ್ಯಗಳನ್ನು ರೂಢಿಸಿಕೊಳ್ಳುವುದು ಬಹಳ ಮುಖ್ಯ. ತಾಂತ್ರಿಕ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳಿದ್ದು, ವಿದ್ಯಾರ್ಥಿಗಳ ಕಲಿಕೆಗೆ ಮುಕ್ತ ಅವಕಾಶ ಕಲ್ಪಿಸಲಾಗಿದೆ. 21ನೇ ಶತಮಾನದ ಆರ್ಥಿಕತೆಯು ವೇಗವಾಗಿ ಓಡುತ್ತಿದೆ. ಹಾಗಾಗಿ

ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ಕೋರ್ಸ್‌ಗೆ ತಕ್ಕಂತೆ ಕೌಶಲಗಳನ್ನು ಬೆಳೆಸಿಕೊಳ್ಳಬೇಕಿದೆ ಎಂದು ಹೇಳಿದರು.

ಘಟಿಕೋತ್ಸವದಲ್ಲಿ 1660 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರೊ. ಎ.ಎನ್. ಸಂತೋಷ್‌ಕುಮಾರ್ ಸ್ವಾಗತಿಸಿದರು. ಪ್ರೊ. ಎಸ್.ಎ. ಧನರಾಜ್ ವಂದಿಸಿದರು. ಡಾ. ಬಿ. ಸುರೇಶ್, ಪ್ರೊ. ಪಿ. ನಂಜುಂಡಸ್ವಾಮಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಮಹಿಳಾ ವಸತಿನಿಲಯಗಳ ವಾರ್ಷಿಕೋತ್ಸವ



**ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ವಸತಿನಿಲಯಗಳ** ವಾರ್ಷಿಕೋತ್ಸವವು ದಿನಾಂಕ 27.01.2024ರಂದು ನೆರವೇರಿತು.

ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸೌಮ್ಯ ಈರಪ್ಪ ಮಾತನಾಡಿ ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದುದ್ದು. ಈ 5 ವರ್ಷಗಳಲ್ಲಿ ಮಕ್ಕಳು ಶ್ರದ್ಧೆ, ಆಸಕ್ತಿ ಹಾಗೂ ಏಕಾಗ್ರತೆಯಿಂದ ಓದುವ ಕಡೆ ಹೆಚ್ಚು ಒಲವು ತೋರಿಸಬೇಕು. ಪೋಷಕರು ನಿಮ್ಮ ಅಭ್ಯುದಯಕ್ಕಾಗಿ ಇಷ್ಟು ದೂರ ವಿದ್ಯಾಭ್ಯಾಸಕ್ಕೆ ಸೇರಿಸಿರುತ್ತಾರೆ. ವಸತಿನಿಲಯದಲ್ಲಿ ಇರುವ ನೀವು ಎಲ್ಲರ ಜೊತೆ ಹೊಂದಿಕೊಂಡು ಹೋಗುವುದನ್ನು ಕಲಿಯಲು ಇದು ಒಂದು ಅವಕಾಶವೆಂದು ಭಾವಿಸಬೇಕು ಎಂದು ಹೇಳಿದರು.

ಮೈಸೂರು ಪೊಲೀಸ್ ತರಬೇತಿ ಶಾಲೆಯ ಶ್ರೀಮತಿ ಗೀತಾ ಪ್ರಸನ್ನರವರು ಉಪಸ್ಥಿತರಿದ್ದರು. ವಸತಿನಿಲಯಗಳ ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತಾ ಸುರೇಶ್ ಅಧ್ಯಕ್ಷತೆ ವಹಿಸಿದ್ದರು.



ಎಐಸಿಟಿಇ ಅಧ್ಯಕ್ಷರಾದ ಪ್ರೊ. ಟಿ.ಜಿ. ಸೀತಾರಾಮ್‌ರವರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ ವಸತಿ ಶಾಲೆಯ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಸಹಸ್ರಾರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು.

## ಕೃಷಿ ಪಾಠ – ದೇಶಿ ಆಟ – ಚಿಣ್ಣರಿಗೆ ಬೇಸಿಗೆ ಶಿಬಿರ

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ನಾಡಿನ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಶತಶತಮಾನಗಳಿಂದ ಸೇವೆ ಸಲ್ಲಿಸುತ್ತಿದೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಪ್ರಸಾದ ನಿಲಯಗಳು ಹಾಗು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವುದರ ಜೊತೆಗೆ ಶ್ರೀಸಾಮಾನ್ಯರ ಏಳಿಗೆಗಾಗಿ ಧಾರ್ಮಿಕ ಹಾಗು ಸಾಂಸ್ಕೃತಿಕ ಸಂಘಸಂಸ್ಥೆಗಳನ್ನು ಪ್ರಾರಂಭಿಸಿದೆ. ಈ ಸಂಸ್ಥೆಗಳ ಮೂಲಕ ಪ್ರತಿ ವರ್ಷ ವಿವಿಧ ಶಿಬಿರಗಳನ್ನು ನಡೆಸಲಾಗುತ್ತಿದೆ.

ಕೃಷಿಕರ ಮಕ್ಕಳು ಕಾರಣಾಂತರಗಳಿಂದ ಕೃಷಿಯಿಂದ ದೂರ ಉಳಿಯುತ್ತಿದ್ದಾರೆ. ಕೃಷಿಕರ ಮಕ್ಕಳಿಗೆ ಕೃಷಿ ಕುರಿತು ಆಸಕ್ತಿ, ಕನಿಷ್ಠ ಜ್ಞಾನ, ತಿಳಿವಳಿಕೆ ನೀಡಲು, ಗ್ರಾಮದತ್ತ ಮಕ್ಕಳನ್ನು ಆಕರ್ಷಿಸಲು 2023ರಿಂದ ಐಸಿಎಆರ್ **ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು** ಹೊಸ ಪ್ರಯತ್ನದೊಂದಿಗೆ ಚಿಣ್ಣರಿಗೆ ಕೃಷಿಪಾಠ ದೇಶಿ ಆಟದೊಂದಿಗೆ ಪ್ರಾರಂಭಿಸಿದೆ.

ಕೃಷಿ ಪಾಠದಲ್ಲಿ ಗೋಆಧಾರಿತ ಕೃಷಿ, ತೋಟಗಾರಿಕೆ, ಕೈತೋಟ, ಎರೆಗೊಬ್ಬರ ತಯಾರಿ, ಬೀಜದುಂಡೆ, ಮಣ್ಣಿನ ಮಹತ್ವ, ಕೀಟ ಪ್ರಪಂಚ, ರೇಷ್ಮೆ ಕೃಷಿ, ಜೇನು ಕೃಷಿ, ಕೃಷಿ ಉಪಕರಣಗಳ ಪರಿಚಯ, ಮಾವಿನ ಕಟಾವು, ಟ್ರ್ಯಾಕ್ಟರ್ ಸವಾರಿ ಇನ್ನಿತರೆ ಕೃಷಿ ಸಂಬಂಧಿತ ವಿಷಯಗಳ ಕುರಿತು ಪರಿಚಯಿಸಲಾಗುವುದು. ದೇಶಿ ಆಟಗಳಲ್ಲಿ ಬುಗುರಿ, ಗಾಳಿಪಟ, ಗೋಲಿ, ಕುಂಟೆಬಿಲ್ಲೆ, ಅಳಿಗುಳಿ ಮನೆ, ಚೌಕಾಬಾರ, ಲಗೋರಿ, ಬಳೇಆಟ ಇವುಗಳ ಮೂಲಕ ರಜ – ಮಜಾ ಮಾಡುವುದು ಹೇಗೆಂದು ತಿಳಿಯಪಡಿಸುವುದು ಈ ಶಿಬಿರದ ಮೂಲ ಉದ್ದೇಶವಾಗಿದೆ. ಇದಲ್ಲದೆ, ಮಕ್ಕಳಿಗೆ ಮೌಲ್ಯಗಳನ್ನು ತಿಳಿಸಲು ಪ್ರತಿನಿತ್ಯ ಪ್ರಾರ್ಥನೆ, ಯೋಗ ಹಾಗು ನೀತಿಕತೆ ತಿಳಿಸಲಾಗುವುದು. ಚಿತ್ರಕಲೆ, ಕಾಗದದಿಂದ ಕರಕುಶಲ ವಸ್ತುಗಳ ತಯಾರಿ, ಮಣ್ಣಿನ ಆಟಿಕೆಗಳ ತಯಾರಿ, ಗಾಳಿಪಟ ತಯಾರಿ ಇವುಗಳ ಕುರಿತು ಹೇಳಿಕೊಡಲಾಗುವುದು.

ಕೃಷಿ ಪಾಠ ದೇಶಿ ಆಟ ಶಿಬಿರವನ್ನು – 2024ರ ಏಪ್ರಿಲ್ 22 ರಿಂದ 27ರವರೆಗೆ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಏರ್ಪಡಿಸಲಾಗಿದೆ. ಈ ಶಿಬಿರಕ್ಕೆ 7–12 ವರ್ಷದ ಮಕ್ಕಳು ಪ್ರವೇಶ ಪಡೆಯಬಹುದು. ಮೊದಲು ಬಂದ 25 ವಿದ್ಯಾರ್ಥಿಗಳಿಗೆ ಆದ್ಯತೆ. ಒಂದು ಮಗುವಿಗೆ ಶುಲ್ಕ ರೂ.500/–ಇರುತ್ತದೆ. ಏಪ್ರಿಲ್ 5 ರೊಳಗೆ ಹೆಸರನ್ನು ನೋಂದಾಯಿಸಬೇಕು.

* ಒಂದು ಮಗುವಿಗೆ ಶುಲ್ಕ ರೂ.500/–
* ಶಿಬಿರದ ಅವಧಿ ಬೆಳಗ್ಗೆ 10 ರಿಂದ ಮಧ್ಯಾಹ್ನ 3.30ರವರೆಗೆ
* ಶಿಬಿರಕ್ಕೆ ತಪ್ಪದೇ ಹಾಜರಾಗಬೇಕು.
* ಶಿಬಿರಾರ್ಥಿಗಳಿಗೆ ಆಟದ ವಸ್ತುಗಳನ್ನು ಒದಗಿಸಲಾಗುವುದು.
* ಚಿತ್ರಕಲೆ, ಕ್ರಾಫ್ಟ್‌ಗೆ ಬೇಕಾದಂತಹ ವಸ್ತುಗಳನ್ನು ಮಕ್ಕಳೇ ತರಬೇಕು
* ಮಧ್ಯಾಹ್ನದ ಊಟವನ್ನು ಮಕ್ಕಳೇ ತರುವುದು.
* ಶಿಬಿರದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಶಂಸನಾ ಪತ್ರ ಹಾಗು ಒಂದು ಗಿಡ ವಿತರಿಸಲಾಗುವುದು.
* ಭರ್ತಿ ಮಾಡಿದ ಅರ್ಜಿಗಳನ್ನು 05.04.2024ರ ಒಳಗೆ ಕೃಷಿ ವಿಜ್ಞಾನ ಕೇಂದ್ರಕ್ಕೆ ಒದಗಿಸುವುದು.

ಹೆಚ್ಚಿನ ಮಾಹಿತಿಗಾಗಿ ಡಾ. ಹೆಚ್.ವಿ. ದಿವ್ಯಾ (8762840430) ಡಾ. ವೈ.ಪಿ. ಪ್ರಸಾದ್ (9986191256) ರವರುಗಳನ್ನು ಸಂಪರ್ಕಿಸುವುದು.

**ಮಾಸಿಕ ಸಾಮೂಹಿಕ ವಿವಾಹ – 2024**

**ಸುತ್ತೂರು ಶ್ರೀಕ್ಷೇತ್ರ**

**ಏಪ್ರಿಲ್ 21, ಭಾನುವಾರ**

**ವಿವರಗಳಿಗೆ ಸಂಪರ್ಕಿಸಿ**

**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ : 08221–232223, 232224**

## ಸಾವಯವ ಕೃಷಿಗೆ ಹೆಚ್ಚಿನ ಒತ್ತು



ಶ್ರೀಮಠ ಹಾಗೂ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ದಿನಾಂಕ 6.2.2024ರಂದು **ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಿಂದ** ಏರ್ಪಡಿಸಿದ್ದ ಕೃಷಿಕರಿಗಾಗಿ ಸಾವಯವ ಮತ್ತು ಮೌಲ್ಯವರ್ಧನೆ ಚರ್ಚೆ ಮತ್ತು ಸಂವಾದದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಾವಯವ ಕೃಷಿ ಕುರಿತು ತರಬೇತಿಗಳು ಹಾಗೂ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರೈತರು ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಸಾವಯವ ಕೃಷಿ ಬಗ್ಗೆ ತರಬೇತಿ ಹಾಗೂ ಮಾಹಿತಿ ಪಡೆಯಬಹುದು ಎಂದು ಹೇಳಿದರು.

ಕನ್ವೇರಿಯ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರ ಮಹಾಸ್ವಾಮಿಗಳವರು ಪ್ರಸಕ್ತ ದಿನಗಳಲ್ಲಿ ಸಾವಯವ ಕೃಷಿಯ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ರೈತರು ಸಾವಯವ ಕೃಷಿ ಕಡೆಗೆ ಮುಖಮಾಡಿ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಬಹುದು. ಸಾವಯವ ಕೃಷಿಕರ ಅನೇಕ ಸಂಘ–ಸಂಸ್ಥೆಗಳು ರಾಜ್ಯದಲ್ಲಿವೆ. ಈ ಎಲ್ಲಾ ಸಾವಯವ ಸಂಘ–ಸಂಸ್ಥೆಗಳು ಒಂದೇ ಸೂರಿನಡಿ ಬಂದು ದೊಡ್ಡಮಟ್ಟದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು ಎಂದು ತಿಳಿಸಿದರು.

ವಿಜಯಪುರದ ಶ್ರೀ ತುಕಾರಾಂರವರು ಪದ್ಧತಿ ಪ್ರಾತ್ಯಕ್ಷಿಕೆಯ ಮೂಲಕ ಸ್ಥಳೀಯವಾಗಿ ದೊರಕುವ ಕೃಷಿ ತ್ಯಾಜ್ಯವಸ್ತುಗಳನ್ನು ಉಪಯೋಗಿಸಿಕೊಂಡು ಕೃಷಿ ಬೆಳೆಗಳಿಗೆ ಉಪಯೋಗಿಸುವ ವಿಗ್ರಗಂಧ ಕಷಾಯ, ಪುಷ್ಪರಸಾಯನ, ಕ್ಷೀರಪರ್ಣಿ ಕಷಾಯ, ಭೂಸಂಜೀವಿನಿ ರಸ ಹಾಗೂ ಇನ್ನಿತರ ಕಷಾಯಗಳನ್ನು ತಯಾರಿಸಿ ಕೃಷಿ ಭೂಮಿಗೆ ಉಪಯೋಗಿಸಿಕೊಳ್ಳುವ ಮೂಲಕ ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಬೇಕೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಾವಯವ ಕೃಷಿಯಲ್ಲಿ ಹೆಚ್ಚು ಪ್ರಚಲಿತ ಹಾಗೂ ಉಪಯೋಗಿಸುತ್ತಿರುವ ಗೋಕೃಪಾಮೃತವನ್ನು ರೈತರಿಗೆ ಉಚಿತವಾಗಿ ವಿತರಿಸಲಾಯಿತು.

ತೀರ್ಥಹಳ್ಳಿಯ ಸಾವಯವ ಕೃಷಿ ಪರಿವಾರ ಸಂಸ್ಥೆಯ ಶ್ರೀ ಆನಂದ್, ಗಟ್ಟವಾಡಿಪುರದ ಶ್ರೀ ಶಿವಕುಮಾರಸ್ವಾಮಿ ಕೊಳ್ಳೇಗಾಲ ತಾಲ್ಲೂಕು ದೊಡ್ಡಇಂದುವಾಡಿಯ ಶ್ರೀ ಕೈಲಾಸಮೂರ್ತಿ, ಮೈಸೂರಿನ ಶ್ರೀ ವೇಣುಗೋಪಾಲ್, ತುಮಕೂರಿನ ಶ್ರೀ ಕಾರ್ತಿಕ್‌ರವರುಗಳು ತಾವು ಕೈಗೊಂಡಿರುವ ಸಾವಯವ ಕೃಷಿ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಸಾವಯವ ಕೃಷಿ ಮಾಡುತ್ತಿರುವ ರೈತರುಗಳು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ನೈಪುಣ್ಯ ಕೌಶಲ್ಯ ತರಬೇತಿ

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜು,** ವಿಜಯವಾಡದ ನಾಂದಿ ಫೌಂಡೆಷನ್ ಮಹಿಂದ್ರ ಪ್ರೈಡ್ ಕ್ಲಾಸ್ ರೂಮ್ ಇವರ ಸಹಯೋಗದಲ್ಲಿ ಐಕ್ಯೂಎಸಿ ವತಿಯಿಂದ ದಿನಾಂಕ 19.2.2024ರಂದು ಆಯೋಜಿಸಿದ್ದ ನೈಪುಣ್ಯ ಕೌಶಲ್ಯ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪ್ರಾಚಾರ್ಯರಾದ ಡಾ. ಎಂ. ಪ್ರಭುರವರು ಮಾತನಾಡಿ ಉನ್ನತ ಮಟ್ಟದ ಭಾವನಾತ್ಮಕ ಬುದ್ಧಿವಂತಿಕೆಯನ್ನು ಹೊಂದಿರುವ ಉದ್ಯೋಗಿ ಉತ್ತಮ ಸಂವಹನ ಕೌಶಲ್ಯ ಮತ್ತು ನೈಪುಣ್ಯ ಕೌಶಲ್ಯಗಳನ್ನು ಹೊಂದಿದ್ದರೆ ಗುರಿಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು, ತಂಡವನ್ನು ಧನಾತ್ಮಕ ರೀತಿಯಲ್ಲಿ ಮುನ್ನಡೆಸಲು ಸಾಧ್ಯವಾಗುತ್ತದೆ. ಶಿಕ್ಷಣದಲ್ಲಿ ಸಾಧನೆ ಮಾಡುವುದರ ಜೊತೆಗೆ ವಿದ್ಯಾರ್ಥಿನಿಯರು ತಮ್ಮ ಜೀವನದ ದೈಹಿಕ, ಕಲಾತ್ಮಕ ಮತ್ತು ಭಾವನಾತ್ಮಕ ಅಂಶಗಳನ್ನು ಹೆಚ್ಚಿಸಲು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕಲು ಸಹಾಯವಾದ ಕೌಶಲ್ಯಗಳನ್ನು ಪಡೆದುಕೊಳ್ಳಬೇಕು ಎಂದರು.

ನಾಂದಿ ಫೌಂಡೇಷನ್ ಮಹಿಂದ್ರ ಪ್ರೈಡ್ ಕ್ಲಾಸ್ ರೂಮ್‌ನ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜೆ. ವಿನಯ್‌ರವರು ಮಾತನಾಡಿ ಆಧುನಿಕಯುಗದಲ್ಲಿ ಪದವಿಯ ಜೊತೆಗೆ ಕೌಶಲ್ಯವು ಮಹತ್ತರವಾದ ಪಾತ್ರವಹಿಸಲಿದ್ದು ವಿದ್ಯಾರ್ಥಿನಿಯರು ಪರಿಣಾಮಕಾರಿ ಸಂವಹನ ಮಾಡುವ, ವ್ಯಕ್ತಿಯ ಸಾಮರ್ಥ್ಯ ನಿರೂಪಿಸುವ ಕೌಶಲ್ಯಗಳನ್ನು ಹೊಂದುವುದರಿಂದ ಒಳ್ಳೆಯ ಉದ್ಯೋಗ ಹಾಗೂ ಉತ್ತಮ ಜೀವನ ರೂಢಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಚಾಲಕರಾದ ಶ್ರೀ ಹೆಚ್.ಜಿ. ನಟರಾಜನ್, ಶ್ರೀಮತಿ ಎಸ್. ಮಮತ, ಶ್ರೀ ಹೆಚ್.ಬಿ. ಗಿರೀಶ್ ಹಾಗೂ 2023–24ನೇ ಸಾಲಿನ ಅಂತಿಮ ಪದವಿ ವಿದ್ಯಾರ್ಥಿನಿಯರು ಹಾಜರಿದ್ದರು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿನಿಯರಿಗೂ ಪ್ರಮಾಣ ಪತ್ರ ವಿತರಿಸಲಾಯಿತು.

## ರಾಷ್ಟ್ರೀಯ ವಿಜ್ಞಾನ ದಿನಾಚರಣೆ

**ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ದಿನಾಂಕ 28.2.2024ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಯಿತು. ಸಹಾಯಕ ಪ್ರಾಧ್ಯಾಪಕರಾದ ಡಾ. ಹೇಮರಾಜುರವರು ರಾಮನ್ ಪರಿಣಾಮ, ನ್ಯೂಟನ್ ನಿಯಮ, ಶಕ್ತಿಯ ಪರಿವರ್ತನೆ, ವಿಕಿರಣ ಚಿಕಿತ್ಸೆ ಮುಂತಾದ ವಿಚಾರಗಳನ್ನು ಕುರಿತು ಮಾತನಾಡಿದರು. ಚಂದ್ರಯಾನ–2ರಲ್ಲಿ ಸೋತ ಭಾರತ ಚಂದ್ರಯಾನ–3ರಲ್ಲಿ ಅಭೂತಪೂರ್ವವಾಗಿ ಜಯಗಳಿಸಿತ್ತು. ಸೋಲುಗಳನ್ನು ಧನಾತ್ಮಕವಾಗಿ ಸ್ವೀಕರಿಸಿ ಗುರಿಯ ಕಡೆ ಗಮನ ಕೊಡಿ. ಜೀವನದಲ್ಲಿ ಸೋಲು ಮತ್ತು ಗೆಲುವು ಸಹಜವಾಗಿ ಬರುತ್ತವೆ. ಸೋತಾಗ ಕುಗ್ಗಬಾರದು. ವಿಜ್ಞಾನ ಕ್ಷೇತ್ರದಲ್ಲಿ ಸಿಗುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಜಯಗಳಿಸಿ ಎಂದರು.

ಕಾರ್ಯಕ್ರಮದಲ್ಲಿ 8ನೇ ತರಗತಿಯ ವಿದ್ಯಾರ್ಥಿಗಳು 'ಪುರಾಣಗಳ ಹಿಂದೆ ವಿಜ್ಞಾನ' ಎಂಬ ವಿಚಾರವನ್ನು ಕುರಿತು ಪ್ರತಿದಿನ ನಮ್ಮ ಸುತ್ತಮುತ್ತ ನಡೆಯುವಂತಹ ಮೂಢನಂಬಿಕೆಗಳಿಗೆ ವೈಜ್ಞಾನಿಕ ಕಾರಣಗಳನ್ನು ದೃಶ್ಯದ ಮೂಲಕ ತಿಳಿಸಿದರು. 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳು ವಿಜ್ಞಾನದ ಹಿಂದೆ ಜಾದೂಲೋಕ ಎಂಬ ವಿಚಾರವನ್ನು ಪ್ರಯೋಗದ ಮೂಲಕ ಸಭಿಕರಿಗೆ ಮನವರಿಕೆ ಮಾಡಿದರು. 9 ನೇ ತರಗತಿಯ ಕು. ಹಿತೈಸಿ ರಾಷ್ಟ್ರಿಯ ವಿಜ್ಞಾನ ದಿನದ ಮಹತ್ವ ಮತ್ತು ರಾಮನ್ ಪರಿಚಯ ಮಾಡಿಕೊಟ್ಟಳು.

ಕಾರ್ಯಕ್ರಮದಲ್ಲಿ ವಿವಿಧ ತರಗತಿಯ ವಿದ್ಯಾರ್ಥಿಗಳು ತಯಾರಿಸಿದಂತಹ ಪ್ರಾತ್ಯಕ್ಷಿಕೆಗಳಾದ ನೀರಿನ ಶುದ್ಧೀಕರಣ, ಮಳೆ ನೀರು ಕೊಯ್ಲು, ಪವರ್ ಹೌಸ್, ವಿಂಡ್ ಮಿಲ್, ರಾಕೆಟ್, ಹನಿ ನೀರಾವರಿ, ಸೌರಶಕ್ತಿಯಿಂದ ವಿದ್ಯುತ್ ಉತ್ಪಾದನೆ, ಹೃದಯ ಸಂಬಂಧಿತ ಮಾಡೆಲ್ ಮುಂತಾದವುಗಳನ್ನು ಪ್ರದರ್ಶಿಸಿದರು.

ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್ ಮಾತನಾಡಿ ರಾಮನ್‌ರಂತಹ ವಿಜ್ಞಾನಿಗಳ ಕೊಡುಗೆಯನ್ನು ಸ್ಮರಿಸುತ್ತಾ ಇಂದು ಪ್ರತಿಯೊಂದು ದೇಶವು ವೈಜ್ಞಾನಿಕವಾಗಿ ಅಭಿವೃದ್ಧಿಯ ಕಡೆ ಸಾಗುತ್ತಿವೆ. ಅದಕ್ಕೆ ಅವಕಾಶಗಳು ಮನೆಯ ಬಾಗಿಲಿಗೆ ಬಂದಿದೆ. ಇವುಗಳನ್ನು ಸದುಪಯೋಗ ಪಡಿಸಿಕೊಂಡು ದೇಶಕ್ಕೆ ಕೊಡುಗೆ ನೀಡಬೇಕು ಎಂದರು.

ಕು. ಸುಜನ್ ಶೆಟ್ಟಿ ಸ್ವಾಗತಿಸಿದರು. ಕು. ಧ್ರುವ ಪ್ರಾರ್ಥಿಸಿದರು. ಕು. ಹಂಸಿಕ ಅತಿಥಿಗಳ ಪರಿಚಯ ಮಾಡಿದರು. ಕು. ರಿಧಿ ವಂದಿಸಿದಳು. ಕು. ಫಾತಿಮಾ ನಿರೂಪಿಸಿದರು.

## ಸಾಧನೆ

### ಜಾನಪದ ನೃತ್ಯದಲ್ಲಿ ಪ್ರಥಮ ಸ್ಥಾನ




**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿಗಳು ದಿನಾಂಕ 27.2.2024ರಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಚಾಮರಾಜನಗರದಲ್ಲಿ ಆಯೋಜಿಸಿದ್ದ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಧಿಕ ತಂಡದವರು ಜಾನಪದ ನೃತ್ಯದಲ್ಲಿ ಪ್ರಥಮ ಸ್ಥಾನ, ಕಾವ್ಯ ತಂಡದವರು ಜನಪದ ಗೀತೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಎಸ್. ಸ್ಫೂರ್ತಿ ಏಕ ಪಾತ್ರಾಭಿನಯದಲ್ಲಿ ಪ್ರಥಮ ಸ್ಥಾನವನ್ನು ಮತ್ತು ಎಲ್ಲಾ ವಿಜೇತ ವಿದ್ಯಾರ್ಥಿನಿಯರು ನಗದು ಬಹುಮಾನ ಪಡೆದಿರುತ್ತಾರೆ. ವಿಜೇತರನ್ನು ಪ್ರಾಂಶುಪಾಲರಾದ ಡಾ. ಎಂ. ಪ್ರಭು ಮತ್ತು ಅಧ್ಯಾಪಕ ಹಾಗೂ ಅಧ್ಯಾಪಕೇತರರು ಅಭಿನಂದಿಸಿದ್ದಾರೆ.

### ಥ್ರೋಬಾಲ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ

ಮೈಸೂರು ನಗರದ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ದಿನಾಂಕ 29.02.2024ರಂದು ನಡೆದ 2023–24ನೇ ಸಾಲಿನ ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆಯರ ಥ್ರೋಬಾಲ್ ಸ್ಪರ್ಧೆಯಲ್ಲಿ **ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು**



**ವಿಜ್ಞಾನ ಕಾಲೇಜಿನ** ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಗಳಿಸಿರುತ್ತಾರೆ.

ವಿಜೇತ ಕ್ರೀಡಾಪಟುಗಳನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಎಸ್. ಪ್ರತಿಭಾ, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ಶ್ರೀ ಎಂ. ಕಾರ್ತಿಕ್, ಶ್ರೀ ಸಿ.ಎಸ್. ನಿರಂಜನ್ ಹಾಗೂ ಬೋಧಕ, ಬೋಧಕೇತರರು ಅಭಿನಂದಿಸಿದ್ದಾರೆ.

## ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕಂಚು




ಮಧ್ಯಪ್ರದೇಶದಲ್ಲಿ 25.1.2024ರಿಂದ 28.1.2024 ರವರೆಗೆ ನಡೆದ ಕಿರಿಯರ 36ನೆಯ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ **ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿನಿ ಕು. ಆರ್. ರೀತುನಾಯಕ್ ಕರ್ನಾಟಕ ತಂಡದಿಂದ ಭಾಗವಹಿಸಿ ಕೇರಳ ತಂಡದ ವಿರುದ್ಧ ವಿಜೇತರಾಗಿ ಕಂಚಿನ ಪದಕ ಪಡೆದು ರಾಜ್ಯಕ್ಕೆ ಕೀರ್ತಿ ತಂದಿರುತ್ತಾರೆ. ಪ್ರಾಂಶುಪಾಲರಾದ ಡಾ. ಎಂ ಪ್ರಭು ಮತ್ತು ಅಧ್ಯಾಪಕ ಹಾಗೂ ಅಧ್ಯಾಪಕೇತರರು ಅಭಿನಂದಿಸಿದ್ದಾರೆ.

## ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ



ಕು. ವಿ. ನಿಸರ್ಗ



ಕು. ಪಿ.ಎಸ್. ಸ್ಫೂರ್ತಿ



ಕು. ಎನ್. ಸುಚಿತ್ರ

ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ವಿ. ನಿಸರ್ಗ ವಿಜ್ಞಾನ ವಿಭಾಗದ ರಸಾಯನಶಾಸ್ತ್ರ ವಿಷಯದಲ್ಲಿ 3 ಚಿನ್ನದ ಪದಕ ಮತ್ತು 2 ನಗದು ಬಹುಮಾನ ಹಾಗೂ ಪ್ರಾಣಿಶಾಸ್ತ್ರ ವಿಷಯದಲ್ಲಿ ಕು. ಪಿ.ಎಸ್. ಸ್ಫೂರ್ತಿ 1 ಚಿನ್ನದ ಪದಕ ಮತ್ತು 2 ನಗದು ಬಹುಮಾನ ಹಾಗೂ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಕು. ಎನ್. ಸುಚಿತ್ರ 1 ಚಿನ್ನದ ಪದಕ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಸಾಧಕ ವಿದ್ಯಾರ್ಥಿಗಳನ್ನು ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಕಾಲೇಜು ಅಭಿನಂದಿಸಿದೆ.

## ಸುತ್ತೂರು ಶಾಲಾ ಮಕ್ಕಳಿಂದ ಮೈನವಿರೇಳಿಸಿದ ಸಾಹಸಮಯ ಮಲ್ಲಕಂಬ ಪ್ರದರ್ಶನ



ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ವಸತಿ ಶಾಲೆಯ ನೂರಾರು ವಿದ್ಯಾರ್ಥಿಗಳು 6 ದಿನಗಳ ಕಾಲ ಮೈನವಿರೇಳಿಸುವ, ಸಾಹಸಮಯ ಮಲ್ಲಕಂಬ ಪ್ರದರ್ಶನವನ್ನು ನೀಡಿದರು.




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೃಷಿಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ತರಳಬಾಳು ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಶ್ರೀ ಮಹಾಂತೇಶ ಕವಟಗಿಮಠ, ಶ್ರೀ ಋಷಿಕೇಶ್ ಉಪಾಧ್ಯಾಯ, ಶ್ರೀ ಸಿ.ಟಿ. ರವಿ, ಸಿದ್ಧಗಂಗಾ ಶ್ರೀಗಳು, ವಾಟಾಳು ಶ್ರೀಗಳು ಹಾಗೂ ಮಾತಾ ಸಾಧ್ವಿ ಉನ್ಮೇಷ ಭಾರತೀಯವರುಗಳಿದ್ದಾರೆ (10 ಫೆಬ್ರವರಿ 2024)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೃಷಿಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಮಾತನಾಡುತ್ತಿರುವುದು. ಶ್ರೀ ಕೆ.ಆರ್. ಮೋಹನ್‌ಕುಮಾರ್, ಶ್ರೀ ಸಿ.ಟಿ. ರವಿ, ಶ್ರೀ ದರ್ಶನ್ ಧ್ರುವನಾರಾಯಣ್, ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ತರಳಬಾಳು ಜಗದ್ಗುರುಗಳು ಹಾಗೂ ವಾಟಾಳು ಶ್ರೀಗಳು ಮೊದಲಾದವರಿದ್ದಾರೆ (10 ಫೆಬ್ರವರಿ 2024)



ಬೀದರ್‌ನ ಚಿದಂಬರಾಶ್ರಮ ಶ್ರೀ ಸಿದ್ಧಾರೂಢ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸಹಸ್ರಚಂದ್ರ ದರ್ಶನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅವರನ್ನು ಸನ್ಮಾನಿಸಿ ಅಭಿನಂದಿಸಿದರು (15 ಫೆಬ್ರವರಿ 2024)




ವಿಜಯಪುರ ಜಿಲ್ಲೆ ಬೊಮ್ಮನಹಳ್ಳಿ ಗ್ರಾಮದಲ್ಲಿ ವಿದೇಶಗಳಿಗೆ ರಫ್ತು ಮಾಡುವ ಒಣದ್ರಾಕ್ಷಿ ಸಂಸ್ಕರಣಾ ಘಟಕ ವಿಪಿಬಿ ಎಕ್ಸ್‌ಪೋರ್ಟ್ಸ್ ಕಂಪನಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ವಿಜಯಪುರ ಜ್ಞಾನಯೋಗಾಶ್ರಮದ ಅಧ್ಯಕ್ಷರಾದ ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ವಿಠ್ಠಲಗೌಡ ಬಿರಾದಾರ್ ಹಾಗೂ ಕುಟುಂಬವರ್ಗದವರುಗಳಿದ್ದಾರೆ (16 ಫೆಬ್ರವರಿ 2024)



ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕು ಕುಂದರಗಿಯ ಶ್ರೀ ಚರಂತಿಮಠದ ಶ್ರೀ ವಿಶ್ವನಾಥದೇವರ ಗುರು ಪಟ್ಟಾಧಿಕಾರ ಮಹೋತ್ಸವವನ್ನು ಸುತ್ತೂರು ಮತ್ತು ಗದಗ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಕೊಣ್ಣೂರು, ಮುಧೋಳ, ಹಾವೇರಿ, ಶೇಗುಣಸಿ ಮಠಗಳ ಶ್ರೀಗಳು, ಶ್ರೀ ಜೆ.ಟಿ. ಪಾಟೀಲ್, ಶ್ರೀ ಎಸ್.ಆರ್. ಪಾಟೀಲ್, ಶ್ರೀ ಎನ್.ಬಿ. ಬನ್ನೂರ, ಶ್ರೀ ಬಸವರಾಜ ಖೋತ ಶ್ರೀ ಎನ್.ಬಿ. ಖೋತರವರುಗಳಿದ್ದಾರೆ (17 ಫೆಬ್ರವರಿ 2024)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ 24 ಫೆಬ್ರವರಿ 2024ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ 264ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಕುನ್ನಕ್ಕುಡಿ ಎಂ. ಬಾಲಮುರಳಿಕೃಷ್ಣರವರು ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯ ಸಹಕಾರದಲ್ಲಿ ವಿದ್ವಾನ್ ಎಚ್.ಎನ್. ಭಾಸ್ಕರ್, ವಿದ್ವಾನ್ ಜಿ.ಎಸ್. ರಾಮಾನುಜಂ ಹಾಗೂ ವಿದ್ವಾನ್ ಅರ್ಜುನ್‌ಕುಮಾರ್‌ರವರುಗಳಿದ್ದಾರೆ

# Valedictory Function Held



**JSS Public School, J.P. Nagar, Mysuru** celebrated its Valedictory Function on 3.2.2024. JSS Management and the staff came together to bid farewell to the outgoing batch of (2024) Grade 10 students. It was an evening filled with mixed emotions for everyone, who assembled there

The evening was a fiesta devoted to the years spent together with friends and teacher and to reminisce those joyous moments.

Sri Ashoka Palya, Deputy Director, Public School Division, JSS Mahavidyapeetha spoke on the occasion educating the students about the innumerable career avenues available in the current scenario. The Guest of Honour, Sri C.C. Pawate impressed the audience with his witty talk, combined with content humour and insight. The evening was brightly lit by his amusing anecdotes which filled the smartly dressed young boys and girls creating ripples of laughter.

Smt. Smitha K. Kurup, Principal, moved the listeners with her heart-touching speech that evoked strong sentiments among the audience.

The students of Grade 9 organised the farewell party with great enthusiasm that left a trail of nostalgia behind.

# Conference Held



**JSS Institute of Speech and Hearing, Dharwad**, in association with the Karnataka Cancer Therapy and Research Institute, Navanagar, Hubli organized a days' RCI (Rehabilitation Council of India) CRE (Continuing Rehabilitation Education) approved Conference on "Dysphagia: Assessment and Management of Swallowing Disorders for Speech Language Pathologists - Beyond the Basics". The Conference was held at Jubilee Hall, KCTRI, Navanagar, Hubli on 9.2.2024. It aimed at providing an update to enhance the knowledge about assessment and therapeutic approaches and recent advances in the field of Dysphagia. All the final year Speech and Hearing under graduate students, Postgraduate students, practicing professionals, working in the field of Dysphagia participated in the Conference. A total of 200 from across the country attended the conference. Eminent speakers from all over the country were invited as resource-persons to share their knowledge on the subject. More than 25 scientific research papers were presented from young students of various Speech and Hearing Institutes across the country. A hands-on demonstration of Fiberoptic Endoscopic Evaluation of swallowing (FEES) and Vital Stim Therapy from SLP Quest was provided for each delegate in the Conference.

On 9.2.2024 the Conference was formally inaugurated. Guest of Honour, Dr. Arun Kumar, Director, DIMHANS, Dharwad, Guests Dr. Vilas Gunda, CEO, KCTRI, Hubli, Dr. P.M. Jijo, Principal, JSS Institute of Speech and Hearing, Dharwad, President Dr. B.R. Patil, Chairman, KCTRI, Hubli inaugurated the event. Sri D. Darshan, Assistant Professor,

JSS Institute of Speech and Hearing, Dharwad and Organizing Secretary was the Master of Ceremony. Sri K.S. Girish, Assistant Professor, JSS Institute of Speech and Hearing, Dharwad sang an invocation. The Principal welcomed the gathering following a brief Introduction of JSSISH and KCTRI, Hubli Institutes.

The dignitaries lit the traditional lamp and officially inaugurated the program. Dr. Arun Kumar, Chief Guest addressed the gathering by congratulating the team and wishing all the best for the program. Dr. Vilas Gunda, CAO, KCTRI, Hubli expressed his best wishes for the program; Dr. B.R. Patil, CEO delivered the keynote address; Ms. K. Theaja, Associate Professor, JSS Institute of Speech and Hearing, Dharwad delivered the vote of thanks.

The scientific posters were presented at the Conference on both the days. Ms. K. Theaja, Dr. R.T. Saikumari evaluated the posters on the first day. Sri K.S. Girish, and Sri D. Darshan evaluated the poster presentation on the second day. The Best Paper Award under UG category and PG and professional's category were announced.

The valedictory program was held on 10.2.2024. Dr. P.M. Jijo and Dr. T. Saikumari were present on the dais. The Principal thanked all the participants and Dr. Saikumari delivered the Valedictory Address. All the speakers, hands-on demonstration volunteers, poster presentation awardees were given the awards and the valedictory program ended with the National Anthem.

## Drug Free Campus Campaign

The **NSS Unit of JSS Academy of Technical Education, Bengaluru** organized a Pledge-taking Ceremony on 15.2.2024 about the "Drug-Free Campus" About 1,500 students and staff members enthusiastically participated in the event and took the pledge.

The pledge contained the following prints:

1. The students would co-operate in stopping drug abuse.
2. They will not consume any harmful or illegal drugs for any purpose and live a healthy life.

The activity created an awareness about the ill-effects of drug abuse and encouraged, especially the youth, to lead a drug-free life, so they can become creative and important members of the society.

## Faculty Achievements



Dr. K.P. Mahesh, Reader, Dept. of Oral Medicine & Radiology, released his latest work, 'An insight to Orofacial Pain'. In this book, he has concentrated on orofacial pain diagnostic criteria. The chapters in the book are on the basics, principles of pain diagnosis and clinical considerations. It is written keeping the undergraduates in mind so that they can understand and diagnose better. Pictorial illustrations would help the students understand well and serve as a basic guide for post-graduates and research scholars.




Dr. Muskan Gupta, 2nd year MDS student, Department of Periodontology is being designated as WOW Dentistry Congress 2024 Student Ambassador -

INDIA, with theme of celebrating the Entrusting, Elevating, Enlightening and Empowering of Womanhood in Dentistry and Facial Aesthetics. The goal of this organisation is to create platform that highlights the achievements of women in Dentistry and Facial Aesthetics and also fosters an environment for networking, learning and professional development.

## Visit of IAS Officer Sri H.V. Darshan

Sri H.V. Darshan, IAS, an alumnus of the 2011 Batch of IEM visited the **JSS Academy of Technical Education, Bengaluru**, on 15.2.2024. He is currently working as the Director, Department of Electronics, IT & BT and the Managing Director, Karnataka Innovation & Technology Society.

The event was co-ordinated by Sri Girish Hiremath, COO, GINSERV and Chief Executive, JSSATE-STEP, along with the JSS ATEB Alumni Association.

An invited talk on "Opportunities for startups" was delivered under the "Luminary Series - Enlightening Conversations with Stars" at the Seminar Hall. Dr. M.R. Prabhushankar, Assistant Professor, Dept. of IEM, gave the welcome speech. Sri Girish Hiremath highlighted the achievements of GINSERV. Subsequently the invited talk was presented by Sri H.V. Darshan. There was a good interaction between the speaker and the faculty and students. This was followed by felicitation to the speaker. Dr. Bhimasen Soragaon, Principal highlighted the importance of start-up culture among the students. Sri Dipankar Das, CEO and Ms Inchara, VP of Alphaabets Digital Labs explained various facilities available at the Electric Vehicle Mobility Centre of Excellence and Innovation. Dr. W. Yerriswamy explained the facilities that exist in Advanced Jewellery Design Technology Centre. Sri Girish Hiremath explained the facilities in JSSATE-STEP. Various activities at the event were supported by student volunteers, Ms. Lahari, 5th Sem. (AIML), Sri Kailash Chandran, 5th Sem. (RA), and Sri Prateet, 3rd Sem. (CSE).

## Yuva Bimba : A Cultural Extravaganza

**JSS Science and Technology University, Mysuru** recently witnessed a spectacular cultural spectacle as it hosted the 37th Inter-University South-East Zone Youth Festival, "Yuva Bimba," under the prestigious banner of the Association of



Indian Universities between 22nd - 26th Feb. 2024. The campus transformed into a vibrant hub, welcoming 1150 participants from universities across Karnataka, Telangana and Chhattisgarh.

The inauguration was held on 22.2.2024. Renowned Playback Singer and Music Director, Sri Vijay Prakash, set the stage on fire with his inspiring speech and enchanting performance, including the ever-popular "Jai Ho." The ceremony, graced by esteemed guests, Sri Vijay Prakash and Dr. Baljit Singh Sekhon, was a showcase of the transformative power of art and literature. Dr. C.G. Betsurmath, Executive Secretary, JSS MVP, and Dr. B. Suresh, Director of Technical Education Division, JSS MVP, added to the fervor with their insights.

The festival unfolded as a melting pot of creativity, expression, and camaraderie. Day-2 was a witness to a captivating One-Act Play Competition, a Western Vocal (Solo) event, a vibrant Mehendi Competition, and a Collage Competition. Skilled musicians enthralled the audience, and a Classical Dance event marked the end of a day filled with artistic brilliance.

Day three brought forth an Elocution Competition, an On-Spot Painting, and Spot Photography Competitions unveiling the participants' creativity and artistic intuition. Western Instrumental (Solo), Group Song Indian, Quiz, Clay Modelling, Poster Making, Classical Vocal (Solo), and Installation Art events kept the excitement alive.

The fourth day featured a Skit involving 15 participants, along with solo performances under various categories. The festival concluded on 26.2.2024 with a valedictory ceremony at the University Football Grounds. Dr. A.N. Santosh Kumar, Vice-Chancellor, delivered an absorbing keynote address, emphasizing the significance of the event. Over 100 trophies were distributed among 28


events in 6 categories, highlighting the festival's success.

The University of Mysore clinched the Overall Championship while JSS Science and Technology University secured the third place, earning an entry into to the National Youth Festival in Punjab.

Prof. Sunil Kumar, Organizing Secretary, wrapped up the ceremony with heartfelt thanks, appreciating everyone involved. "Yuva Bimba" truly left an indelible mark, celebrating diversity, talent and the transformative power of youth.

## JSSATE, Bengaluru

### Book Baro Andolan




The NSS Unit of **JSSATE** organized a Book Baro Andolan, wherein PUC books and study materials were collected from the students and distributed to the following Pre-University colleges.

1. Govt. College, Kaggalipura, Kanakapura Road, Bengaluru
2. Govt. PU College, Huliyar, Chikkanayakana halli, Tumakuru
3. Govt. PU College, Puruvara, Madhugiri, Tumakuru.

### Chhote Scientist: An Outreach Activity

The NSS Unit and ISE Department of **JSS Academy of Technical Education, Bengaluru**, in association with Youth for Seva, organized "Chhote Scientist- an Outreach Activity" from Nov. 2023 to Feb. 2024 at various government schools located around JSSATE, Bengaluru. About 50 students participated in the program and conducted lectures covering topics such as sound, light, pressure, and chemistry. These sessions were designed to be interactive, focusing on hands-on



experiments tailored for Grade 7 and 8 students in those schools.

The program incorporated pre- and post-tests on the first and last days to gauge the impact of the lectures. On 2nd and 3rd Feb. 2024, an exhibition was organized providing an opportunity for students to showcase experiments inspired by the topics covered in the lectures. This event encouraged creativity and practical application of the concepts learned during the program.

The outcomes of the event are as follows:

1. The Chhote Scientist program gave the NSS volunteers a transformative teaching experience;

2. It served as a platform to refine their oratory skills, presentation abilities, patience, persuasive skills, vocabulary, knowledge, and understanding of the subject matter.

3. it witnessed the students' growth and the bonds formed during the program was truly a memorable one.

* * *



The NSS Unit of **JSSATE** organized the "Yuva Samvad India@2047" program on 26.2.2024 at the Seminar Hall.

The program was inaugurated by Sri K. Rajesh, Executive Director, Samhati Foundation, Sri L. Kiran Kumar, MIT,

Mysuru, Dr. M. Nirupama, Program Manager, Youth for Seva, Dr. D. Mahesh Kumar, Dean of Student Welfare and Dr. N. Girish, NSS Programme Officer. Dr. Naveen, Dean Academics, Dr. C.V. Vinay, and Dr. Prasanna Kumar, Professors were also present at the function.

Sri K. Rajesh delivered a talk on "Contributions of Youth in Nation Building". An Elocution Competition was conducted which attracted students from various engineering colleges.

The NSS volunteers enthralled the audience with cultural segment after lunch. Three winners were awarded a book Modi@20 Dreams Meet Delivery, and, cash prizes by the Principal and other dignitaries. All the participants were awarded a book and a certificate as a token of encouragement.


* * *

## Water Conservation Campaign



The NSS Unit of **JSSATE, Bengaluru** organized the Water Conservation Awareness Program on 16.2.2024. The NSS volunteers explained the importance of water and different ways of saving it in the classes and labs. The students took an oath to minimize the use of water and stop wasting it. They also understand different ways to save water in a day to day life.

* * *



The NSS Unit of **JSSATE** organized Swachh Bharat Saptah from 12-17th Feb. 2024 at the Campus. About 250 students participated in this campus cleaning drive. All the students took the Swachhta Pledge during the Saptah and committed to keep their class, workplace, campus and home neat and tidy.



ಶ್ರೀ ಸುತ್ತೂರು ಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವ (10 ಫೆಬ್ರವರಿ 2024)



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿ. ಶ್ರೀ ಪ್ರಕಾಶ ಗಡಕರರವರ ಪರವಾಗಿ ಶ್ರೀಮತಿ ರಾಜೇಶ್ವರಿ ಗಡಕರರವರಿಗೆ ಶ್ರೀ ಡಿ.ವಿ. ಹಾಲಭಾವಿ ಪ್ರಶಸ್ತಿ, ಡಾ. ಎಚ್.ಎಸ್. ಅನುಪಮಾರವರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಹಾಗೂ ಶ್ರೀ ಎ. ಕಿರಣ್ ಸುಬ್ಬಯ್ಯನವರಿಗೆ ಶ್ರೀ ಎಂ. ವೀರಪ್ಪ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಶ್ರೀಮತಿ ಜಯಂತಿ ಗುರುಸ್ವಾಮಿ, ಶ್ರೀ ಸುರೇಶ್ ಹಾಲಭಾವಿ, ಡಾ. ವಿಠ್ಠಲರೆಡ್ಡಿ ಎಫ್. ಚುಳಕಿ, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಚಂದ್ರಕಾಂತ ಬೆಲ್ಲದ್, ಪ್ರೊ. ಶರಣಪ್ಪ ವಿ. ಹಲಸೆ, ಶ್ರೀಮತಿ ಸುಶೀಲ ಸತೀಶ್, ಪ್ರೊ. ಎನ್.ಕೆ. ಲೋಕನಾಥ್, ಶ್ರೀ ಯೋಗಿ ಶ್ರೀನಿವಾಸ ಅರ್ಕ, ಡಾ. ಡಿ.ವಿ. ಶಂಕರ್, ಡಾ. ಕವಿತಾ ರೈಯವರುಗಳಿದ್ದಾರೆ.

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 9, Issue No. 3, March 2024




ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ಶ್ರೀ ಶಾಮನೂರು ಶಿವಶಂಕರಪ್ಪ ಅತಿಥಿಗೃಹವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಉದ್ಘಾಟಿಸಿದರು. ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಪ್ರಲ್ಹಾದ್ ಎ. ಜೋಷಿ ಹಾಗೂ ಶ್ರೀ ಬಸವರಾಜ ಬೊಮ್ಮಾಯಿಯವರುಗಳಿದ್ದಾರೆ (11 ಫೆಬ್ರವರಿ 2023)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ ಸಭೆಯನ್ನು ಉದ್ಘಾಟಿಸಲಾಯಿತು. ಶ್ರೀ ಮುರುಗೇಶ್ ನಿರಾಣಿ, ಶ್ರೀಮತಿ ಪುಷ್ಪಲತಾ ಮಂಕಾಳ್ ವೈದ್ಯ, ಶ್ರೀ ಮಂಕಾಳ್ ವೈದ್ಯ, ಶ್ರೀಮತಿ ರೀಟಾ ಶ್ರೀಧರನ್ ಪಿಳ್ಳೈ, ಶ್ರೀ ದೀಪಕ್ ಸಲೂಜ, ಗೋವಾದ ರಾಜ್ಯಪಾಲರಾದ ಶ್ರೀ ಪಿ.ಎಸ್. ಶ್ರೀಧರನ್ ಪಿಳ್ಳೈ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರವಣಬೆಳಗೊಳದ ಶ್ರೀಗಳು, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಎ. ಮಂಜು ಹಾಗೂ ಶ್ರೀ ಎಂ.ಡಿ. ಲಕ್ಷ್ಮೀನಾರಾಯಣರವರುಗಳಿದ್ದಾರೆ (8 ಫೆಬ್ರವರಿ 2024)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ಟಿವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn.223 e-mail: jssmasapatrike@gmail.com website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**